# ಅಖಿಲ ಭಾರತ ವೀರಶೈವ ಮಹಾಸಭಾ (ರಿ.)

ನಂ.17/4, 'ವೀರಶೈವ-ಲಿಂಗಾಯತ ಭವನ', ಸದಾಶಿವನಗರ, ಬೆಂಗಳೂರು-560 080

## 2016-17ನೇ ಸಾಲಿನ ವಾರ್ಷಿಕ ವರದಿ

**ಮಾನ್ಯರೆ,**

ಮಹಾಸಭೆಯ 2016-17ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಗೆ ತಮ್ಮೆಲ್ಲರನ್ನು ಸ್ವಾಗತಿಸಲು ಹರ್ಷಿಸುತ್ತೇವೆ. 2016-17ನೇ ಸಾಲಿನ **"ವಾರ್ಷಿಕ ವರದಿ"**ಯನ್ನು ತಮ್ಮ ಅವಗಾಹನೆಗೆ ಹಾಗೂ ಒಪ್ಪಿಗೆಗಾಗಿ ಕಾರ್ಯಕಾರಿ ಸಮಿತಿಯ ಪರವಾಗಿ ಮಂಡಿಸುತ್ತಿದ್ದೇವೆ.

**1. ಕಾರ್ಯಕಾರಿ ಸಮಿತಿ ಸಭೆಗಳು :-**

ವರದಿಯ ಅವಧಿಯಲ್ಲಿ ದಿನಾಂಕ: 13-07-2016, 28-09-2016 ಮತ್ತು 10-2-2017ರಂದು **"ಹಾನಗಲ್ ಕುಮಾರಸ್ವಾಮಿಗಳ ಸಭಾಂಗಣ", ಬೆಂಗಳೂರು**ಇಲ್ಲಿ ಒಟ್ಟು 3 ಕಾರ್ಯಕಾರಿ ಸಮಿತಿ ಸಭೆಗಳು ನಡೆದಿರುತ್ತವೆ. ಈ ಸಭೆಗಳಲ್ಲಿ ಒಟ್ಟು 10 ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ನಿರ್ಣಯಗಳು ಈ ಕೆಳಗಿನಂತಿವೆ.

1 2015-16ನೇ ಸಾಲಿನ ಅರ್ಹ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಆಯಾಯಾ ಜಿಲ್ಲಾ ಘಟಕಗಳ ಮುಖಾಂತರ ರೂ. 1500/-ಗಳು, ಸ್ಟೀಲ್ ಕರಡಿಗೆ (ಲಿಂಗು, ರುದ್ರಾಕ್ಷಿ, ಶಿವಧಾರ, ವಸ್ತ್ರ ಸೇರಿ) ಹಾಗೂ ಪ್ರಶಸ್ತಿ ಪತ್ರವನ್ನು ನೀಡಲು ನಿರ್ಣಯಿಸಲಾಯಿತು.

2 ಉಳವಿಯಲ್ಲಿ ದಿನಾಂಕ: 22-4-2016 ರಿಂದ 24-4-2016ರವರೆಗೆ ನಡೆದ **ರಾಷ್ಟ್ರೀಯ ಚೈತನ್ಯ ಶಿಬಿರ 2016** ನಡೆಸಲು ನಿರ್ಣಯಿಸಲಾಯಿತು.

3 ಹಿಂದುಳಿದ ವರ್ಗಗಳ ಆಯೋಗವು ನಡೆಸಿದ **"ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ(ಜಾತಿ ಜನಗಣತಿ)"** ಅಂಕಿ ಸಂಖ್ಯೆಗಳನ್ನು ಪ್ರಕಟಿಸುವ ಪೂರ್ವದಲ್ಲಿ ಇದರ ಬೆಳವಣಿಗೆಯನ್ನು ನೋಡಿಕೊಂಡು ಮುಂದಿನ ಕ್ರಮ ಜರುಗಿಸಲು ಮಹಾಸಭೆಯ ಅಧ್ಯಕ್ಷರಿಗೆ ಅಧಿಕಾರ ನೀಡಲು ನಿರ್ಣಯಿಸಲಾಯಿತು.

4 ಆಂಧ್ರ ವೀರಶೈವ-ಲಿಂಗಾಯತ ಮಹಾಸಭಾ ಸಂಸ್ಥೆಯನ್ನು ಅಖಿಲ ಭಾರತ ವೀರಶೈವ ಮಹಾಸಭೆಯೊಂದಿಗೆ ಸೇರಿಸಿಕೊಳ್ಳಲು ನಿರ್ಣಯಿಸಲಾಯಿತು.

5 ಸಂವಿಧಾನ ತಿದ್ದುಪಡಿ ಉಪಸಮಿತಿಯು ಸಲ್ಲಿಸಿರುವ **"ಕರಡು ಸಂವಿಧಾನ ತಿದ್ದುಪಡಿ"**ಯನ್ನು ವಿಸ್ತೃತವಾಗಿ ಚರ್ಚೆಮಾಡಲು ಮುಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಲು ನಿರ್ಣಯಿಸಲಾಯಿತು.

6 ರಾಷ್ಟ್ರೀಯ, ರಾಜ್ಯ ಪದಾಧಿಕಾರಿಗಳ ಹಾಗೂ ಜಿಲ್ಲಾ ಘಟಕಗಳ ಅಧ್ಯಕ್ಷರುಗಳ ನಾಮಫಲಕವನ್ನು ಮಹಾಸಭೆಯ ಒಳಾಂಗಣದಲ್ಲಿ ಅಳವಡಿಸಲು ನಿರ್ಣಯಿಸಲಾಯಿತು.

7 2003ರಂತೆ ಗುರು-ವಿರಕ್ತರನ್ನು ಒಂದೇ ವೇದಿಕೆಯಲ್ಲಿ ಸೇರಿಸುವ ಮೂಲಕ **"ವೀರಶೈವ-ಲಿಂಗಾಯತ ಒಂದೇ"** ಎಂಬ ಭಾವನೆ ಮೂಡಿಸುವ ಕಾರ್ಯವನ್ನು ಮತ್ತೆ ಮತ್ತೆ ಮಾಡಬೇಕು ಎಂದು ನಿರ್ಣಯಿಸಲಾಯಿತು.

8 ಉಚಿತ ವಸತಿ ನಿಲಯ ಸ್ಥಾಪನೆ ಮಾಡುವುದಕ್ಕಾಗಿ ತಜ್ಞರನ್ನು ಸೇರಿಸಿಕೊಂಡು **"ಕಟ್ಟಡ ಸಮಿತಿ"(Building Committee)** ರಚಿಸಲು ಮಹಾಸಭೆಯ ಅಧ್ಯಕ್ಷರಿಗೆ ಅಧಿಕಾರ ಕೊಡಲು ನಿರ್ಣಯಿಸಲಾಯಿತು.

**2. ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆ :–**

ವರದಿಯ ಅವಧಿಯಲ್ಲಿ ದಿನಾಂಕ: 25–12–2016ರಂದು 2015–16ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯು **"ತರಳಬಾಳು ಕೇಂದ್ರ ಸಭಾಂಗಣ",**3ನೇ ಮುಖ್ಯರಸ್ತೆ, 2ನೇ ಬ್ಲಾಕ್, ತರಳಬಾಳು ಮಾರ್ಗ, ಆರ್.ಟಿ.ನಗರ(ಬಿ.ಡಿ.ಎ. ಕಾಂಪ್ಲೆಕ್ಸ್ ಪಕ್ಕದಲ್ಲಿ), ಬೆಂಗಳೂರು ಇಲ್ಲಿ ನಡೆದಿರುತ್ತದೆ. (ನಡವಳಿಗಳನ್ನು ಪುಟ 3 ರಿಂದ 31 ರವರೆಗೆ ಮುದ್ರಿಸಲಾಗಿದೆ).

**3. ಕೃಷಿ ಕಾಯಕ ತ್ರೈಮಾಸಿಕ ಪತ್ರಿಕೆ :–**

ವರದಿಯ ಅವಧಿಯಲ್ಲಿ ಏಪ್ರಿಲ್–ಜೂನ್–2016, ಜುಲೈ–ಸೆಪ್ಟಂಬರ್–2016, ಅಕ್ಟೋಬರ್–ಡಿಸೆಂಬರ್–2016 ಹಾಗೂ ಜನವರಿ–ಮಾರ್ಚ್–2017ರ ನಾಲ್ಕು ತ್ರೈಮಾಸಿಕ ಪತ್ರಿಕೆಗಳು ಸಮಯಾನುಸಾರ ಮುದ್ರಿಸಲ್ಪಟ್ಟು ಚಂದಾದಾರರಿಗೆ ಹಾಗೂ ಸಾರ್ವಜನಿಕರಿಗೆ ಒದಗಿಸಿದೆ. **ಸದಸ್ಯರೆಲ್ಲರೂ ಈ ಪತ್ರಿಕೆಯ ಚಂದಾದಾರರಾಗಬೇಕೆಂದು ಮತ್ತು ಈ ಪತ್ರಿಕೆಯ ಮುದ್ರಣದ ಪ್ರಾಯೋಜಕರಾಗಲು ಕೋರುತ್ತೇವೆ. ಮುದ್ರಣದ ಪ್ರಾಯೋಜಕರಾದರೆ ಪತ್ರಿಕೆಯ "ಪೋಷಕ"ರಾಗುವುದಲ್ಲದೇ ಪ್ರಕಟಿತ ಪತ್ರಿಕೆಯಲ್ಲಿ ತಮ್ಮ ಪ್ರಾಯೋಜಕತ್ವವನ್ನು ವಿವರಿಸಿ, ತಮ್ಮ ಸ್ವ–ವಿವರಗಳು, ಸಾಧನೆ ಮತ್ತು ಭವಿಷ್ಯದ ಗುರಿಗಳ ಬಗ್ಗೆ ಭಾವಚಿತ್ರ ಸಹಿತ ಪ್ರಕಟಿಸಲಾಗುವುದು.**

**4. ಸದಸ್ಯರ ನೋಂದಣಿ :–**

ದಿನಾಂಕ: 1–4–2016 ರಿಂದ 31–3–2017ರವರೆಗಿನ ಅವಧಿಯಲ್ಲಿ ಎಲ್ಲಾ ವರ್ಗಗಳ **2409** ಸದಸ್ಯರು ನೋಂದಣಿಯಾಗಿದ್ದಾರೆ. ಈ ಅವಧಿಯಲ್ಲಿ **47** ಸದಸ್ಯರು ಲಿಂಗೈಕ್ಯರಾಗಿದ್ದು ಇವರುಗಳನ್ನು ಸದಸ್ಯತ್ವದಿಂದ ಕೈಬಿಡಲಾಗಿದೆ. ದಿನಾಂಕ:31–03–2017 ರವರೆಗೆ ಎಲ್ಲಾ ವರ್ಗಗಳ ಒಟ್ಟು **1,00,446**ಸದಸ್ಯರು ನೋಂದಾಯಿತರಾಗಿದ್ದಾರೆ. ಸದಸ್ಯರ ನೋಂದಣಿ ಪ್ರಕ್ರಿಯೆಯಲ್ಲಿ ವಿವಿಧ ಘಟಕಗಳ/ವಿಭಾಗಗಳ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು, ಮಹಿಳೆಯರು ಹಾಗೂ ಯುವಕರು ಶ್ರಮವಹಿಸಿ ಸದಸ್ಯರನ್ನು ನೋಂದಾಯಿಸಿದ್ದಾರೆ. ಮಹಾಸಭೆ ಅವರೆಲ್ಲರನ್ನು ಅಭಿನಂದಿಸುತ್ತದೆ.

| ಕ್ರಸಂ | ವರ್ಗೀಕರಣ | ಸದಸ್ಯತ್ವದ ಸಂಖ್ಯೆ |
|---|---|---|
| 1 | ಆಜೀವ ಸದಸ್ಯರು | 1328 |
| 2 | ಆಶ್ರಯದಾತರು | 358 |
| 3 | ಸಂಘ–ಸಂಸ್ಥೆಗಳು | 04 |
| 4 | ಉಪಪೋಷಕರು | 679 |
| 5 | ಸಹಪೋಷಕರು | 11 |
| 6 | ಮಹಾಪೋಷಕರು | 04 |
| 7 | ಮಹಾದಾನಿ | 25 |
| | **ಒಟ್ಟು** | **2409** |

**5. ಮಹಾಸಭೆಯ ಸದಸ್ಯರಿಗೆ "ಗುರುತಿನ ಚೀಟಿ" ವಿತರಿಸುವುದು :–**

ಮಹಾಸಭೆಯ ಸದಸ್ಯರಾದವರಿಗೆ ಅವರ ಭಾವಚಿತ್ರವಿರುವ **"ಗುರುತಿನ ಚೀಟಿ"**ಯನ್ನು ಮಹಾಸಭೆಯಿಂದ ವಿತರಿಸಲಾಗುತ್ತಿದೆ. ಮಾನ್ಯ ಸದಸ್ಯರೆಲ್ಲರೂ ಇತ್ತೀಚಿನ ತಮ್ಮ 2 ಭಾವಚಿತ್ರ ಒದಗಿಸುವ ಮೂಲಕ ಈ ಸೌಲಭ್ಯವನ್ನು ಪಡೆದುಕೊಳ್ಳಬೇಕೆಂದು ಕೋರುತ್ತೇವೆ. ಅಲ್ಲದೇ ಇತರ ಸದಸ್ಯರಿಗೂ ಈ ಬಗ್ಗೆ ಮಾಹಿತಿ ನೀಡಬೇಕೆಂದು ವಿನಂತಿಸುತ್ತೇವೆ. ಮುಂದಿನ ಚುನಾವಣೆಗೆ ಮತಚಲಾಯಿಸಲು **"ಗುರುತಿನ ಚೀಟಿ"**ಯನ್ನು ಕಡ್ಡಾಯ ಮಾಡಲಾಗುವುದು.

**6. ಅಖಿಲ ಭಾರತ ವೀರಶೈವ ಮಹಾಸಭೆಯಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ :–**

ಪ್ರತಿವರ್ಷದಂತೆ 2015–16ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಶೇಕಡ 90 ಹಾಗೂ 90ಕ್ಕಿಂತ ಹೆಚ್ಚು ಅಂಕ ಪಡೆದ ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ **'ಪ್ರತಿಭಾ ಪುರಸ್ಕಾರ'** ನೀಡಿ ಪ್ರೋತ್ಸಾಹಿಸಲಾಗಿದೆ. ವಿವರ ಈ ಕೆಳಗಿನಂತಿದೆ.

| | | |
|---|---|---|
| 1 | ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆ (2710X1500) | 40,65,000 |
| 2 | ಕರಡಿಗೆ (ಶಿವಧಾರ, ರುದ್ರಾಕ್ಷಿ, ಲಿಂಗು, ವಸ್ತ್ರ, ಜೋಡಣೆ ಶುಲ್ಕ ಸೇರಿ) 3000 ಕ್ಕೆ | 3,04,400 |
| 3 | ಪ್ರಶಂಸಾ ಪತ್ರ ಮುದ್ರಣ ವೆಚ್ಚ 3000 ಕ್ಕೆ | 14,800 |
| 4 | ಚೆಕ್ ಪುಸ್ತಕ 3000 ಕ್ಕೆ (ಬ್ಯಾಂಕ್ ಚಾರ್ಜಸ್) | 10,350 |
| | **ಒಟ್ಟು** | **43,94,550** |

**7. ಎಲ್ಲ ಜಿಲ್ಲೆಗಳಲ್ಲಿ "ಉಚಿತ ವಿದ್ಯಾರ್ಥಿಗಳ ವಸತಿ ನಿಲಯ" ಹಾಗೂ "ವೀರಶೈವ–ಲಿಂಗಾಯತ ಭವನ"ಗಳ ನಿರ್ಮಾಣ:–**

ಇಂದಿನ ದಿನಮಾನಗಳಲ್ಲಿ ಶಿಕ್ಷಣ ಅತಿ ಮುಖ್ಯವಾಗಿರುತ್ತದೆ. ಉನ್ನತ ಮಟ್ಟದ ಶಿಕ್ಷಣ ಪಡೆಯುವಲ್ಲಿ ಗ್ರಾಮೀಣ ಪ್ರದೇಶದ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಸಾಧ್ಯವಾಗದೇ ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ ಈ ಸಂಬಂಧ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ **"ಉಚಿತ ವಿದ್ಯಾರ್ಥಿಗಳ ವಸತಿ ನಿಲಯ"**ಗಳನ್ನು ಹಾಗೂ ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಘಟಕಗಳು ಕೇಂದ್ರ ಕಛೇರಿಯಂತೆ ಸ್ವತಂತ್ರವಾಗಿ ಕೆಲಸ ನಿರ್ವಹಿಸಲು **"ವೀರಶೈವ–ಲಿಂಗಾಯತ ಭವನ"**ಗಳನ್ನು ನಿರ್ಮಾಣ ಮಾಡುವ ಮಹತ್ವದ ಗುರಿ ಹೊಂದಲಾಗಿದೆ.

ಈ ಉದ್ದೇಶಕ್ಕಾಗಿ ಘಟಕಗಳು ನೋಂದಾಯಿಸುವ ಎಲ್ಲಾ 13 ವರ್ಗಗಳ ಸದಸ್ಯತ್ವದ ಹಣದಲ್ಲಿ ಶೇಕಡ 90ರ ಹಣವನ್ನು ಕೊಡಲಾಗುತ್ತಿದೆ. ಈ ಸೌಲಭ್ಯವನ್ನು ಈಗಾಗಲೇ ವಿಜಯಪುರ, ಧಾರವಾಡ, ಹಾವೇರಿ, ಶಿವಮೊಗ್ಗ, ಗದಗ, ಮೈಸೂರು, ದಾವಣಗೆರೆ ಜಿಲ್ಲಾ ಘಟಕಗಳು ಹಾಗೂ ಆಳಂದ ತಾಲ್ಲೂಕು ಘಟಕ ಪಡೆಯುತ್ತಿವೆ. ಉಳಿದ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗುವುದು.

**8. ಬೆಂಗಳೂರಿನ ಹೊಸ ವಿಮಾನ ರಸ್ತೆಯ ಸಮೀಪ ಇರುವ ತರಹುಣಸೆ ಗ್ರಾಮದಲ್ಲಿ "ವಿದ್ಯಾರ್ಥಿಗಳ ಉಚಿತ ವಸತಿ ನಿಲಯ"ನಿರ್ಮಾಣಕ್ಕೆ"ಧನಸಹಾಯ" ಮಾಡಲು ಮನವಿ:–**

ಮಹಾಸಭೆಯ ಉದ್ದೇಶಿತ **"ಉಚಿತ ವಿದ್ಯಾರ್ಥಿಗಳ ವಸತಿ ನಿಲಯ"** ನಿರ್ಮಾಣಕ್ಕೆ ಬೆಂಗಳೂರಿನ ಹೊಸ ವಿಮಾನ ರಸ್ತೆಯ ಸಮೀಪ ಇರುವ ತರಹುಣಸೆ ಗ್ರಾಮದಲ್ಲಿ 2 ಎಕರೆ ಜಾಗವನ್ನು ಪಡೆಯಲಾಗಿದೆ. ಈ ಜಾಗವು ಮಹಾಸಭೆಯ ಹೆಸರಿಗೆ ನೋಂದಣಿಯಾಗಿದೆ ಹಾಗೂ ಖಾತೆ ಬದಲಾವಣೆಯೂ ಆಗಿದೆ. ಭೂಪರಿವರ್ತನೆಗಾಗಿ ಸರ್ಕಾರಕ್ಕೆ ಮನವಿ

ಸಲ್ಲಿಸಲಾಗಿದೆ. ಸರ್ಕಾರದಿಂದ ಆದೇಶ ಬಂದ ನಂತರ ಉದ್ದೇಶಿತ ಕೆಲಸವನ್ನು ಪ್ರಾರಂಭಿಸಲಾಗುವುದು. ಈ ಉದ್ದೇಶಿತ ನಿರ್ಮಾಣಕ್ಕೆ ಇಲ್ಲಿಯವರೆಗೆ **ರೂ.57,54,776/–**ಗಳು ಸಂಗ್ರಹವಾಗಿರುತ್ತದೆ. ಉದ್ಯಮಿಗಳು, ರಾಜಕಾರಣಿಗಳು, ಸಮಾಜದ ಗಣ್ಯವ್ಯಕ್ತಿಗಳು ಹಾಗೂ ಇನ್ನಿತರ ಎಲ್ಲ ಕ್ಷೇತ್ರಗಳ ಮಾನ್ಯ ಸದಸ್ಯರುಗಳು, ಸಮಾಜಾಭಿಮಾನಿಗಳು ಈ ಸತ್ಕಾರ್ಯಕ್ಕೆ ತಮ್ಮ ಕೈಲಾದಷ್ಟು **"ಧನಸಹಾಯ"** ನೀಡಿ **"ವಿದ್ಯಾರ್ಥಿಗಳ ಉಚಿತವಸತಿ ನಿಲಯ"** ಸ್ಥಾಪನೆಗೆ ಕಾರಣೀಭೂತರಾಗಬೇಕೆಂದು ಕೋರಲಾಗಿದೆ.

**9. ಜನಪ್ರತಿನಿಧಿಗಳ ಮತ್ತು ಸಮಾಜ ಮುಖಂಡರುಗಳ ಸಭೆ:**

**ವೀರಶೈವ–ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಪಡೆಯುವ ಬಗ್ಗೆ ಮತ್ತುವೀರಶೈವ–ಲಿಂಗಾಯತರ ಬೃಹತ್ ಸಮಾವೇಶ** ಹಮ್ಮಿಕೊಳ್ಳುವ ಸಲುವಾಗಿ ಜನಪ್ರತಿನಿಧಿಗಳ ಮತ್ತು ಸಮಾಜದ ಮುಖಂಡರುಗಳ ಸಭೆಯನ್ನು ಮಹಾಸಭೆಯ ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪನವರು, ಶಾಸಕರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 23–03–2017ರಂದು ಬೆಂಗಳೂರಿನ ಗುಬ್ಬಿ ತೋಟದಪ್ಪ ಧರ್ಮ ಸಂಸ್ಥೆಯ ಬೆಲ್ ಹೋಟೆಲ್ ಸಭಾಂಗಣದಲ್ಲಿ ಕರೆಯಲಾಗಿತ್ತು.

ಈ ಸಭೆಯಲ್ಲಿ ಹಾಲಿ ಮತ್ತು ಮಾಜಿ ಸಚಿವರುಗಳು, ಸಂಸತ್ ಸದಸ್ಯರುಗಳು, ಶಾಸಕರುಗಳು, ನಿಗಮಮಂಡಳಿಗಳ ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಸಮಾಜದ ಗಣ್ಯವ್ಯಕ್ತಿಗಳು/ಮುಖಂಡರುಗಳು, ಮಹಾಸಭೆಯ ಪದಾಧಿಕಾರಿಗಳು, ಸಮಿತಿ ಸದಸ್ಯರುಗಳು ಬಹುಸಂಖ್ಯೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಿದರು.

**10. ಅಖಿಲ ಭಾರತ ವೀರಶೈವ ಮಹಾಸಭಾ ಮತ್ತು ರಾಜ್ಯ ಒಕ್ಕಲಿಗರ ಒಕ್ಕೂಟದ ಸಂಯುಕ್ತ ಸಭೆ:**

ಜನಗಣತಿಯ ವರದಿ ಪ್ರಕಟಣೆಗೆ ಪೂರ್ವದಲ್ಲಿ ದಿನಾಂಕ: 23–5–2016ರ ಸೋಮವಾರದಂದು ಮಹಾಸಭೆಯ ಹಿರಿಯ ಉಪಾಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷರೂ ಆದ ಶ್ರೀ ಎನ್.ತಿಪ್ಪಣ್ಣನವರ ಅಧ್ಯಕ್ಷತೆಯಲ್ಲಿ ಮಹಾಸಭಾ ಹಾಗೂ ರಾಜ್ಯ ಒಕ್ಕಲಿಗರ ಒಕ್ಕೂಟದ ಸಂಯುಕ್ತ ಸಭೆಯನ್ನು ಮಹಾಸಭೆಯ ಪೂಜ್ಯ ಹಾನಗಲ್ ಕುಮಾರಸ್ವಾಮಿಗಳ ಸಭಾಂಗಣದಲ್ಲಿ ಕರೆಯಲಾಗಿತ್ತು. ಈ ಸಭೆಯಲ್ಲಿ ಮಹಾಸಭೆಯ ಪದಾಧಿಕಾರಿಗಳು, ಜಿಲ್ಲಾ ಘಟಕಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯ ಒಕ್ಕಲಿಗರ ಒಕ್ಕೂಟದ ಪದಾಧಿಕಾರಿಗಳು ಭಾಗವಹಿಸಿ ವರದಿಯು ಅವೈಜ್ಞಾನಿಕವಾಗಿರುವುದರಿಂದ ಅದನ್ನು ಪ್ರಕಟಿಸದಂತೆ ಸರ್ಕಾರವನ್ನು ಹಾಗೂ ಆಯೋಗವನ್ನು ಒತ್ತಾಯಿಸಿ ಜಂಟಿಯಾಗಿ ಪತ್ರವನ್ನು ಬರೆಯಲಾಯಿತು.

**11. ಸಭೆ, ಸನ್ಮಾನ ಹಾಗೂ ಅಭಿನಂದನಾ ಸಮಾರಂಭಗಳು :–**

(ಎ) **ಶರಣರ ಜಯಂತಿ ಕಾರ್ಯಕ್ರಮ :–**

12ನೇ ಶತಮಾನದ ಜಗಜ್ಯೋತಿ ಶ್ರೀ ಬಸವೇಶ್ವರರ ಸಮಕಾಲೀನ ಶರಣ/ಶರಣೆಯರುಗಳ ಕಾಯಕ, ಸಮಾಜಕ್ಕೆ ಅವರ ಕೊಡುಗೆಗಳನ್ನು ಸ್ಮರಿಸುವ ಹಾಗೂ ಸಮಾಜಬಾಂಧವರಿಗೆ ತಿಳಿಸುವ ಸಲುವಾಗಿ ಮಹಾಸಭೆಯ ಮಹಿಳಾ ವಿಭಾಗದವರು ದಿನಾಂಕ: 25–07–2016ರಂದು **"ವಿಶ್ವಗುರು ಬಸವಣ್ಣ, ಅಕ್ಕಮಹಾದೇವಿ, ಕುಂಬಾರ ಗುಂಡಯ್ಯ, ಹಡಪದ ಅಪ್ಪಣ್ಣ ಜಯಂತ್ಯೋತ್ಸವ"** ಹಾಗೂ ಮಹಾಸಭಾ ರಾಷ್ಟ್ರೀಯ ಮಹಿಳಾ ವಿಭಾಗ **"ಉದ್ಘಾಟನಾ ಸಮಾರಂಭ"**ವನ್ನು ಹಮ್ಮಿಕೊಳ್ಳಲಾಗಿತ್ತು. ರಾಷ್ಟ್ರೀಯ ಮಹಿಳಾ ವಿಭಾಗದ ವತಿಯಿಂದ ದಿನಾಂಕ: 12–11–2016ರಂದು **"ಶರಣೆ ನೀಲಾಂಬಿಕೆ ಜಯಂತಿ"** ಹಾಗೂ **"ಕನ್ನಡ ರಾಜ್ಯೋತ್ಸವ"**ವನ್ನು ಮಹಾಸಭೆಯ **"ಹಾನಗಲ್ ಕುಮಾರಸ್ವಾಮಿಗಳ ಸಭಾಂಗಣ"**, ಸದಾಶಿವನಗರ, ಬೆಂಗಳೂರು ಇಲ್ಲಿ ಆಚರಿಸಲಾಗಿದೆ.

(ಬಿ) **5ನೇ ವಚನೋತ್ಸವ ಕಾರ್ಯಕ್ರಮ :–**

ದಿನಾಂಕ: 17–12–2016ರಂದು **"5ನೇ ವಚನೋತ್ಸವ"** ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಮಹಿಳಾ ವಿಭಾಗದವತಿಯಿಂದ ಮಹಾಸಭೆಯ **"ಹಾನಗಲ್ ಕುಮಾರಸ್ವಾಮಿಗಳ ಸಭಾಂಗಣ"**, ಸದಾಶಿವನಗರ, ಬೆಂಗಳೂರು ಇಲ್ಲಿ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಹೆಚ್ಚು ಮಹಿಳೆಯರು ಭಾಗವಹಿಸಿ ಸಮಾರಂಭವನ್ನು ಯಶಸ್ವಿಗೊಳಿಸಿದರು.

**12. ಕರ್ನಾಟಕ ರಾಜ್ಯ ಘಟಕದ ಕಾರ್ಯಚಟುವಟಿಕೆಗಳು :–**

- ಜಿಲ್ಲಾ ಘಟಕಗಳು ಏರ್ಪಡಿಸುವ **"ಪ್ರತಿಭಾ ಪುರಸ್ಕಾರ"** ಸಮಾರಂಭದಲ್ಲಿ ರಾಜ್ಯ ಘಟಕದ ಪದಾಧಿಕಾರಿಗಳು ಭಾಗವಹಿಸಿದ್ದಾರೆ.
- ಸಂವಿಧಾನದ ಪ್ರಕಾರ ತಾಲ್ಲೂಕು ಘಟಕದ ರಚನೆ ಮಾಡಲು ಹಾಗೂ ಸಾಧ್ಯವಿರದ ತಾಲ್ಲೂಕುಗಳಲ್ಲಿ **"ಅಡಹಾಕ್ ಘಟಕ"**ಗಳನ್ನು ರಚಿಸಿ ಸಂಘಟನೆಗೆ ಚಾಲನೆ ನೀಡಲಾಗಿದೆ.
- ಮಹಾಸಭೆಗೆ ಇನ್ನೂ ಸದಸ್ಯರಾಗದೇ ಇರುವವರನ್ನು ಸದಸ್ಯರಾಗುವಂತೆ ಪ್ರೇರೇಪಿಸಲಾಗಿದೆ.
- ಒಳಪಂಗಡಗಳ ಭೇದ–ಭಾವ ಮರೆತು ನಾವೆಲ್ಲ ಒಂದೇ. ನಾವೆಲ್ಲ ವೀರಶೈವ–ಲಿಂಗಾಯತರೇ ಎಂಬುದರ ಬಗ್ಗೆ ಅರಿವು ಮೂಡಿಸಲಾಗಿದೆ. ಇದರಿಂದಾಗುವ ಅನುಕೂಲಗಳ ಬಗ್ಗೆಯೂ ಜಾಗೃತಿ ಮೂಡಿಸಲಾಗಿದೆ.

**14. ಕರ್ನಾಟಕ ರಾಜ್ಯದ ಜಿಲ್ಲಾ, ತಾಲ್ಲೂಕು ಹಾಗೂ ಇತರೇ ಘಟಕಗಳ ಕಾರ್ಯಚಟುವಟಿಕೆಗಳು :–**

**ಬೆಂಗಳೂರು ನಗರ ಜಿಲ್ಲೆ :–**

- ಬೆಂಗಳೂರು ನಗರ ಜಿಲ್ಲಾ ಘಟಕದ ವತಿಯಿಂದ ದಿನಾಂಕ: 22–01–2017ರಂದು **"**ಶರಾಫ್ ಬಸಪ್ಪ ಸಭಾಂಗಣ**"**, ಆನಂದರಾವ್ ಸರ್ಕಲ್, ಬೆಂಗಳೂರು ಇಲ್ಲಿ **"ಪ್ರತಿಭಾ ಪುರಸ್ಕಾರ** ಮತ್ತು **ಸನ್ಮಾನ ಸಮಾರಂಭ"**ವನ್ನು ಏರ್ಪಡಿಸಲಾಗಿತ್ತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಹಾಸಭೆಯಿಂದ ಕೊಟ್ಟ ಕರಡಿಗೆ, ಚೆಕ್ ಹಾಗೂ ಪ್ರಶಂಸಾ ಪತ್ರ ವಿತರಿಸಿ ಪ್ರೋತ್ಸಾಹಿಸಲಾಯಿತು.
- ಇದೇ ಕಾರ್ಯಕ್ರಮದಲ್ಲಿ ಬೆಂಗಳೂರು ಜಿಲ್ಲಾ ಪಂಚಾಯತಿ ಸದಸ್ಯರಾಗಿ ಆಯ್ಕೆಯಾದ **ಶ್ರೀ ಜಿ.ಮರಿಸ್ವಾಮಿ,** ಕರ್ನಾಟಕ ಸರ್ಕಾರದ ಜೈವಿಕ ಇಂಧನ ಮಂಡಳಿಯ ಅಧ್ಯಕ್ಷರಾಗಿ ಆಯ್ಕೆಯಾದ **ಶ್ರೀ ಬಸವರಾಜ ರಾಮನಾಳ್,** ಚಲನಚಿತ್ರ ನಟಿಯಾದ **ಶ್ರೀಮತಿ ಚಂದ್ರಿಕಾ,** ಚಲನಚಿತ್ರ ನಿರ್ಮಾಪಕರು ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತರಾದ **ಶ್ರೀ ಉಮೇಶ್ ಬಣಕಾರ** ಮತ್ತು ಗಾಯಕರು ಹಾಗೂ ಸಂಗೀತ ನಿರ್ದೇಶಕರು ಆದ **ಶ್ರೀ ಜೆ. ಅನೂಪ್** ಸೀಳಿನ್ ಇವರುಗಳನ್ನ ಸನ್ಮಾನಿಸಲಾಯಿತು.
- ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕ ಘಟಕದ **"ಉದ್ಘಾಟನಾ ಸಮಾರಂಭ"** ಹಾಗೂ **"ಧರ್ಮಜಾಗೃತಿ ಸಮಾವೇಶ"**ವನ್ನು ದಿನಾಂಕ: 25–9–2016ರಂದು ಪರಮಪೂಜ್ಯ ಶ್ರೀ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಜರುಗಿತು. ಸಮಾರಂಭವನ್ನು ಮಹಾಸಭೆಯ ಹಿರಿಯ ಉಪಾಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷರಾದ

ಶ್ರೀ ಎನ್.ತಿಪ್ಪಣ್ಣನವರು ಉದ್ಘಾಟಿಸಿದರು. ಮಹಾಸಭೆಯ ಇನ್ನಿತರ ಪದಾಧಿಕಾರಿಗಳು ಭಾಗವಹಿಸಿದ್ದರು. ಸಮಾರಂಭದಲ್ಲಿ ಕುಂಭಗಳ ಮೆರವಣಿಗೆ ಎಲ್ಲರನ್ನು ಆಕರ್ಷಿಸುತಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಪಾಲ್ಗೊಂಡು ಸಮಾರಂಭವನ್ನು ಯಶಸ್ವಿಗೊಳಿಸಿದರು.

- ಬೆಂಗಳೂರು ನಗರ ಜಿಲ್ಲಾ ಮಹಿಳಾ ವಿಭಾಗದಿಂದ **"ಅಕ್ಕಮಹಾದೇವಿ ಜಯಂತಿ"** ಮತ್ತು **"ಮಹಿಳಾ ದಿನಾಚರಣೆ"** ಕಾರ್ಯಕ್ರಮವನ್ನು ಮಹಾಸಭೆಯ ಪೂಜ್ಯ ಹಾನಗಲ್ ಕುಮಾರಸ್ವಾಮಿಗಳ ಸಭಾಂಗಣದಲ್ಲಿ ಜರುಗಿಸಲಾಯಿತು.

**ಬಾಗಲಕೋಟೆ ಜಿಲ್ಲೆ :–**

- ಮಹಾಸಭೆಯ ಸದಸ್ಯತ್ವದ ಅಭಿಯಾನ ಮುಂದುವರೆಸಿದ್ದು ಇನ್ನೂ ಹೆಚ್ಚು ಸದಸ್ಯರನ್ನು ಹೊಂದುವ ಪ್ರಯತ್ನ ನಡೆದಿದೆ. ತಾಲ್ಲೂಕುಗಳ ಪದಾಧಿಕಾರಿಗಳ ಸಭೆ ಕರೆದು ಕೇಂದ್ರ ಸಮಿತಿಯಿಂದ ಬಂದ ಸುತ್ತೋಲೆ, ವರದಿಗಳ ಅನುಷ್ಠಾನಕ್ಕೆ ತಿಳಿಸಲಾಗಿದೆ.
- ದಿನಾಂಕ: 19–05–2016ರಂದು **"ಮಹಾತ್ಮ ಬಸವೇಶ್ವರರ ಜಯಂತ್ಯೋತ್ಸವ"**ವನ್ನು ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಹಯೋಗದೊಂದಿಗೆ ಆಚರಿಸಲಾಯಿತು. ಬಸವಣ್ಣನವರ ಭಾವಚಿತ್ರವನ್ನು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ಸಂದರ್ಭದಲ್ಲಿ ಹಲವು ರೂಪಕಗಳು ಜನರನ್ನು ಆಕರ್ಷಿಸಿದವು.
- ದಿನಾಂಕ: 18–4–2016 ರಿಂದ 22–4–2016ರವರೆಗೆ **"ವೀರವಿರಾಗಿಣಿ ಅಕ್ಕಮಹಾದೇವಿಯ ಜಯಂತಿ"**ಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿ ಸಾಮಾಜಿಕ, ಧಾರ್ಮಿಕ ಜಾಗೃತಿಯನ್ನುಂಟು ಮಾಡಿದ್ದು ವಿಶೇಷವಾಗಿತ್ತು.
- ಜಗದ್ಗುರು ಶ್ರೀ ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠಾಧೀಶರ ಪರಮಪೂಜ್ಯ ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜನ್ಮ ಶತಮಾನೋತ್ಸವದ ಅಂಗವಾಗಿ ನಾಡಿನಾದ್ಯಂತ ಸಂಚರಿಸಿದ ಶ್ರೀ ಶಿವರಾತ್ರಿ ರಾಜೇಂದ್ರ ಜ್ಯೋತಿಯಾತ್ರೆಯು ದಿನಾಂಕ: 31–5–2016ರಂದು ಬಾಗಲಕೋಟೆಗೆ ಆಗಮಿಸಿದಾಗ ಪೂಜ್ಯ ಸ್ವಾಮಿಗಳ ಹಾಗೂ ಸಕಲ ಸದ್ಭಕ್ತರೊಂದಿಗೆ ಧರ್ಮಸಭೆ ಜರುಗಿಸಲಾಯಿತು.
- ಮನೆ ಅಂಗಳದಲ್ಲಿ ಶರಣ ಸಾಹಿತ್ಯ ಕಾರ್ಯಕ್ರಮವನ್ನು ಶರಣ ಸಾಹಿತ್ಯ ಪರಿಷತ್ತಿನೊಂದಿಗೆ ಪ್ರತಿ ಶನಿವಾರದಂದು ಸಾಯಂಕಾಲ ಒಬ್ಬ ಶರಣರ ಮನೆಯಲ್ಲಿ ಏರ್ಪಡಿಸುತ್ತಾ ಬರಲಾಗಿದೆ. ಅಂದು ವಿದ್ವಾಂಸರೊಬ್ಬರಿಂದ ಒಂದು ವಚನದ ವಿಶ್ಲೇಷಣೆ ಜರುಗಿ ಅದರ ಬಗ್ಗೆ ಎಲ್ಲರೂ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿರುವುದು 12ನೇ ಶತಮಾನದ ಅನುಭಾವ ಗೋಷ್ಠಿ ನೆನಪಿಗೆ ತರುವಂತಿದೆ.
- ದಿನಾಂಕ: 3–8–2016 ರಿಂದ 2–9–2016ರವರೆಗೆ ಶ್ರೀ ಕಣವಿ ವೀರಭದ್ರೇಶ್ವರ ಟ್ರಸ್ಟ್, ಬಾಗಲಕೋಟೆ ಇವರ ಸಹಯೋಗದೊಂದಿಗೆ **ಶ್ರಾವಣ ಮಾಸ ಪರ್ಯಂತ ಪ್ರವಚನ**ವನ್ನು ಚರಂತಿಮಠದಲ್ಲಿ ಜರುಗಿಸಲಾಯಿತು.
- ದಿನಾಂಕ: 10–12–2016ರಂದು ಬಿ.ವಿ.ವಿ. ಸಂಘದ ಮಿನಿ ಸಭಾಭವನದಲ್ಲಿ 2016ನೇ ಶೈಕ್ಷಣಿಕ ವರ್ಷದಲ್ಲಿ ಶೇಕಡ 90 ಹಾಗೂ 90ಕ್ಕಿಂತ ಹೆಚ್ಚು ಅಂಕ ಗಳಿಸಿದ ಎಸ್.ಎಸ್.ಎಲ್.ಸಿ.ಮತ್ತು ದ್ವಿತೀಯ ಪಿ.ಯು.ಸಿ.ವಿದ್ಯಾರ್ಥಿಗಳಿಗೆ **"ಪ್ರತಿಭಾ ಪುರಸ್ಕಾರ"** ನೀಡಿ ಗೌರವಿಸಲಾಯಿತು. ಮಹಾಸಭೆಯ ಉಪಾಧ್ಯಕ್ಷರು ಹಾಗೂ ಮಾಜಿ ಶಾಸಕರಾದ ಶ್ರೀ ವೀರಣ್ಣ ಚರಂತಿಮಠ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಗಂಗಾಧರ ನರೇಗಲ್ ಸೇರಿದಂತೆ ಮಹಾಸಭೆಯ ಇನ್ನಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

- ಜಂಗಮ ಸಮಾಜದ ನೇತೃತ್ವದಲ್ಲಿ ದಿನಾಂಕ: 10-3-2017ರಂದು **"ಆದಿ ಜಗದ್ಗುರು ರೇಣುಕಾಚಾರ್ಯರ ಜಯಂತಿ"**ಯನ್ನು ಆಚರಿಸಲಾಯಿತು. ಶ್ರೀ ರೇಣುಕರ ಭಾವಚಿತ್ರದ ಮೆರವಣಿಗೆಯನ್ನು ನಗರದ ಪ್ರಮುಖ ಬೀದಿಗಳಲ್ಲಿ ಅಸಂಖ್ಯಾತ ಸಕಲ ಸಮಾಜದ ಜನತೆಯ ಸಮ್ಮುಖದಲ್ಲಿ ಜರುಗಿಸಲಾಯಿತು.
- ಜಮಖಂಡಿ ತಾಲ್ಲೂಕು ಘಟಕದ ವತಿಯಿಂದ ಅಖಿಲ ಭಾರತ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ **"ಬಸವ ಜಯಂತಿ"** ಮತ್ತು**"ಅಕ್ಕನ ಜಯಂತಿ"**ಗಳನ್ನು ಅರ್ಥಪೂರ್ಣವಾಗಿ ದಿನಾಂಕ:9-5-2016ರಂದು ಆಚರಿಸಲಾಯಿತು.
- ಮುಧೋಳ ತಾಲ್ಲೂಕು ಘಟಕದ ವತಿಯಿಂದ ಒಳಪಂಗಡಗಳ ಮುಖಂಡರ ಸಭೆ ಕರೆದು ಧಾರ್ಮಿಕವಾಗಿ ಎಲ್ಲರೂ ಏಕತಾಭಾವನೆಯಿಂದ ಅಕ್ಕನ ಜಯಂತಿ ಮತ್ತು ಬಸವ ಜಯಂತಿ ಆಚರಿಸಲು ನಿರ್ಧರಿಸಿ, ದಿನಾಂಕ: 22-04-2016ರಂದು **"ಅಕ್ಕನ ಜಯಂತಿ"**ಯನ್ನು ಮತ್ತು ದಿನಾಂಕ: 9-5-2016ರಂದು **"ಬಸವ ಜಯಂತಿ"**ಯನ್ನು ಅದ್ದೂರಿಯಾಗಿ ಆಚರಿಸಲಾಯಿತು.
- ಬೀಳಗಿ ತಾಲ್ಲೂಕು ಘಟಕದ ವತಿಯಿಂದ ದಿನಾಂಕ: 9-5-2016ರಂದು ಬಸವ ಜಯಂತಿ ನಿಮಿತ್ತ 11 ದಿನಗಳ ಕಾಲ **ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನ ಪ್ರವಚನ** ನಡೆಸಲಾಯಿತು. ಶ್ರಾವಣಮಾಸದಲ್ಲಿ 11 ದಿನಗಳ ಕಾಲ ಶರಣರ ದರ್ಶನ ಕುರಿತು ಪ್ರವಚನ ಏರ್ಪಡಿಸಲಾಗಿತ್ತು. ದಿನಾಂಕ: 14-1-2017ರಂದು **"ಶ್ರೀ ಸಿದ್ಧರಾಮೇಶ್ವರ ಜಯಂತಿ"**ಯನ್ನು ಆಚರಿಸಲಾಯಿತು.
- ಬಾದಾಮಿ ತಾಲ್ಲೂಕು ಘಟಕದ ವತಿಯಿಂದ **"ಬಸವ ಜಯಂತಿ"** ಹಾಗೂ **"ಅಕ್ಕನ ಜಯಂತಿ"**ಯನ್ನು ಶ್ರಾವಣಮಾಸದಲ್ಲಿ ಪುರಾಣ ಪ್ರವಚನ ಏರ್ಪಡಿಸಲಾಗಿತ್ತು.ಪ್ರತಿ ತಿಂಗಳ ಮೊದಲ ರವಿವಾರ **ಶಿವಾನುಭವ ಕಾರ್ಯಕ್ರಮ**ವನ್ನು ನಡೆಸಲಾಗುತ್ತಿದೆ.
- ಹುನಗುಂದ ತಾಲ್ಲೂಕು ಘಟಕದ ವತಿಯಿಂದ ಶ್ರಾವಣ ಮಾಸದಲ್ಲಿ ಪ್ರವಚನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ದಿನಾಂಕ: 9-5-2016ರಂದು **"ಬಸವ ಜಯಂತಿ"**ಯನ್ನು ಹಾಗೂ ದಿನಾಂಕ: 22-4-2016ರಂದು **"ಅಕ್ಕನ ಜಯಂತಿ"**ಯನ್ನು ಆಚರಿಸುವುದರ ಜೊತೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

**ಕಾರವಾರ ಜಿಲ್ಲೆ:-**

- ದಿನಾಂಕ: 28-11-2016ರಂದು ಶಿರಸಿಯ ಬಣ್ಣದಮಠದಲ್ಲಿ ಲಿಂಗೈಕ್ಯ ಮ.ನಿ.ಪ್ರ.ಶ್ರೀ ಶಿವಲಿಂಗ ಮಹಾಶಿವಯೋಗಿಗಳವರ ಮತ್ತು ಲಿಂಗೈಕ್ಯ ಮ.ನಿ.ಪ್ರ.ಶ್ರೀ ಗುರುಸಿದ್ದ ರಾಜಯೋಗೀಂದ್ರ ಮಹಾಸ್ವಾಮಿಗಳವರ **ದೀಪೋತ್ಸವ ಸಮಾರಂಭ**ವನ್ನು ಭಕ್ತಿ-ಭಾವದಿಂದ ನೆರವೇರಿಸಲಾಯಿತು.
- ದಿನಾಂಕ: 28-11-2016ರಂದು ಕಾರವಾರ ಜಿಲ್ಲಾ ಘಟಕದ ವತಿಯಿಂದ 2015-16ನೇ ಸಾಲಿನ ಪ್ರತಿಭಾ **"ಪುರಸ್ಕಾರ ಸಮಾರಂಭ"**ವನ್ನು ಆಯೋಜಿಸಿ ಎಸ್.ಎಸ್.ಎಲ್.ಸಿ.ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಶೇಕಡ 90 ಹಾಗೂ 90ಕ್ಕಿಂತ ಹೆಚ್ಚು ಅಂಕಗಳಿಸಿದ ಪ್ರತಿಭಾವಂತ ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳಿಗೆ ಮಹಾಸಭೆಯ ಕೇಂದ್ರ ಕಛೇರಿಯಿಂದ ಕಳುಹಿಸಿದ್ದ ಕರಡಿಗೆ, ಚೆಕ್ ಹಾಗೂ ಪ್ರಶಸ್ತಿ ಪತ್ರಗಳನ್ನು ನೀಡಿ ಗೌರವಿಸಲಾಯಿತು. ಬಣ್ಣದಮಠದ ಮಠಾಧ್ಯಕ್ಷರಾದ ಶಿವಲಿಂಗಮಹಾಸ್ವಾಮಿಗಳು ಸಾನ್ನಿಧ್ಯವಹಿಸಿದ್ದರು. ಮಹಾಸಭೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ವಿಜಯಪುರ ಜಿಲ್ಲೆ:–**

- 2015–16ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಶೇಕಡಾ 90 ಹಾಗೂ ಅದಕ್ಕಿಂತ ಹೆಚ್ಚು ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ದಿನಾಂಕ: 23–1–2017ರಂದು **'ಪ್ರತಿಭಾ ಪುರಸ್ಕಾರ'**ವನ್ನು ಏರ್ಪಡಿಸಿ, ಸಾಧಕ ವಿದ್ಯಾರ್ಥಿಗಳಿಗೆ ಮಹಾಸಭೆಯ ಕೇಂದ್ರ ಕಛೇರಿಯಿಂದ ಕಳುಹಿಸಿದ್ದ ಕರಡಿಗೆ, ಚೆಕ್ ಹಾಗೂ ಪ್ರಶಸ್ತಿ ಪತ್ರಗಳನ್ನು ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಸಮಾಜ ಸೇವಕರಾದ ಗುತ್ತಿಗೆದಾರರ ಸಂಘದ ಶ್ರೀ ಶಿವಣ್ಣ ಬಿಂಜಲಬಾವಿಯವರನ್ನು ಸನ್ಮಾನಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷರಾದ ಶ್ರೀ ಎಸ್.ಸಿ.ಉಪ್ಪಿನ್ ವಹಿಸಿದ್ದರು. ಸಮಾಜದ ಗಣ್ಯವ್ಯಕ್ತಿಗಳು ಹಾಗೂ ಮಹಾಸಭೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.
- ಪ್ರತಿವರ್ಷದಂತೆ **"ಬಸವ ಜಯಂತಿ"**ಯನ್ನು ಅರ್ಥಪೂರ್ಣವಾಗಿ, ವೈಭವಯುತವಾಗಿ ಆಚರಿಸಲಾಯಿತು.

**ಗದಗ ಜಿಲ್ಲೆ :–**

- 2015–16ನೇ ಸಾಲಿನ **"ಪ್ರತಿಭಾ ಪುರಸ್ಕಾರ"**ವನ್ನು ವಿಧಾನಪರಿಷತ್ ಸದಸ್ಯರಾದ ಶ್ರೀ ಎಸ್.ವಿ.ಸಂಕನೂರು ಇವರ ಅಧ್ಯಕ್ಷತೆಯಲ್ಲಿ ನಡೆಸಿ ಪ್ರತಿಭಾವಂತ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಮಹಾಸಭೆಯಿಂದ ಕೊಟ್ಟ ಕರಡಿಗೆ, ಚೆಕ್ ಹಾಗೂ ಪ್ರಶಸ್ತಿ ಪತ್ರಗಳನ್ನು ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಮಹಾಸಭೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.
- ಕಪ್ಪತ್ತಗುಡ್ಡ ಅರಣ್ಯ ಪ್ರದೇಶವನ್ನು ಸರ್ಕಾರ ಸಂರಕ್ಷಿತ ಅರಣ್ಯ ಪ್ರದೇಶವೆಂದು ಘೋಷಿಸಲು ಒತ್ತಾಯಿಸಿ ಶ್ರೀ ಜಗದ್ಗುರು ತೋಂಟದ ಸಿದ್ದಲಿಂಗಮಹಾಸ್ವಾಮಿಗಳ ನೇತೃತ್ವದಲ್ಲಿ ಅಹೋರಾತ್ರಿ ಧರಣಿ ಮಾಡಲಾಯಿತು. ಹೋರಾಟದಲ್ಲಿ ಮಹಾಸಭೆಯ ಜಿಲ್ಲಾ ಘಟಕದ ಸದಸ್ಯರೆಲ್ಲರು ಭಾಗವಹಿಸಿ ಸರ್ಕಾರಕ್ಕೆ ಒತ್ತಾಯ ಪೂರ್ವಕ ಮನವಿಯನ್ನು ಸಲ್ಲಿಸಲಾಯಿತು ಮತ್ತು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಯಿತು.
- ಪ್ರತಿವರ್ಷದಂತೆ ಬಸವ ಜಯಂತಿಯನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳ ಜೊತೆ ಮತ್ತು ಶ್ರೀ ಜಗದ್ಗುರು ತೋಂಟದ ಸಿದ್ದಲಿಂಗಮಹಾಸ್ವಾಮಿಗಳವರ ಮಠದಲ್ಲಿ ಅರ್ಥಪೂರ್ಣವಾಗಿ, ವಿಜೃಂಭಣೆಯಿಂದ ಆಚರಿಸಲಾಯಿತು.

**ಚಿತ್ರದುರ್ಗ ಜಿಲ್ಲೆ :–**

- ಮಹಾಸಭೆಯ ಹಿರಿಯ ಉಪಾಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷರಾದ ಶ್ರೀ ಎನ್.ತಿಪ್ಪಣ್ಣನವರ ಅಧ್ಯಕ್ಷತೆಯಲ್ಲಿ 2015–16ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಅತಿಹೆಚ್ಚು ಅಂಕಗಳಿಸಿದ ಜಿಲ್ಲೆಯ ಪ್ರತಿಭಾವಂತ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರವನ್ನು ಏರ್ಪಡಿಸಲಾಗಿತ್ತು. ಸಮಾರಂಭದಲ್ಲಿ ಮಹಾಸಭೆಯಿಂದ ಕೊಟ್ಟ ಕರಡಿಗೆ, ಚೆಕ್ ಹಾಗೂ ಪ್ರಶಸ್ತಿ ಪತ್ರಗಳನ್ನು ನೀಡಿ ಗೌರವಿಸಲಾಯಿತು. ಮಹಾಸಭೆಯ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.
- ಮಹಾಸಭೆಯ ಹೊಸದುರ್ಗ ತಾಲ್ಲೂಕು ಮಹಿಳಾ ವಿಭಾಗದಿಂದ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಮಾರಂಭದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮಾರಂಭವನ್ನು ಯಶಸ್ವಿಗೊಳಿಸಿದರು.

- ಮಹಾಸಭೆಯ ಹಿರಿಯೂರು ತಾಲ್ಲೂಕು ಘಟಕದ ಮಹಿಳಾ ವಿಭಾಗವು ಸ್ಫೂರ್ತಿ ಮಹಿಳಾ ಅಧ್ಯಯನ ಸಂಸ್ಥೆ ಮಧ್ಯ ಕರ್ನಾಟಕ ಹಾಗೂ ಇನ್ನರ್ ವೀಲ್ ಕ್ಲಬ್, ಹಿರಿಯೂರು ಇವರ ಸಂಯುಕ್ತ ಆಶ್ರಯದಲ್ಲಿ ಮಹಿಳಾ ಆರೋಗ್ಯದ ಬಗ್ಗೆ ಬಿ.ಎಡ್ ಕಾಲೇಜ್ ವಿದ್ಯಾರ್ಥಿನಿಯರಿಗೆ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.
- ಹಿರಿಯೂರು ತಹಶೀಲ್ದಾರರವರ ಕಛೇರಿಯಲ್ಲಿ ಹಮ್ಮಿಕೊಂಡಿದ್ದ ಹೇಮರಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮದಲ್ಲಿ ತಾಲ್ಲೂಕು ಮಹಿಳಾ ವಿಭಾಗದ ಅಧ್ಯಕ್ಷರಾದ ಶ್ರೀಮತಿ ಶಶಿಕಲಾ ರವಿಶಂಕರ್ ಹಾಗೂ ಇತರೇ ಪದಾಧಿಕಾರಿಗಳು ಪಾಲ್ಗೊಂಡು ಸಮಾರಂಭವನ್ನು ಯಶಸ್ವಿಗೊಳಿಸಲಾಯಿತು.ಈ ಸಮಾರಂಭದಲ್ಲಿ ಸ್ಥಳೀಯ ಶಾಸಕರಾದ ಶ್ರೀ ಡಿ.ಸುಧಾಕರ್‌ರವರು ಭಾಗವಹಿಸಿದ್ದರು.
- ಹಿರಿಯೂರು ತಾಲ್ಲೂಕು ಘಟಕದ ವತಿಯಿಂದ ಬಸವ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಬಸವಣ್ಣನವರ ಮೂರ್ತಿಯನ್ನು ಅಲಂಕರಿಸಿ ಮುತ್ತಿನ ಪಲ್ಲಕ್ಕಿಯಲ್ಲಿ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಲಾಯಿತು. ಮೆರವಣಿಗೆಯಲ್ಲಿ ಬಸವಾಭಿಮಾನಿಗಳು ಭಾಗವಹಿಸಿದ್ದರು. ಅದರಲ್ಲೂ ಮಹಿಳಾ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮೆರವಣಿಗೆಯನ್ನು ಯಶಸ್ವಿಗೊಳಿಸಿದರು.

**ಕೋಲಾರ ಜಿಲ್ಲೆ:–**

- ದಿನಾಂಕ: 1–4–2016 ರಂದು ಡಾ. ಶ್ರೀಶ್ರೀ ಶಿವಕುಮಾರ ಸ್ವಾಮಿಗಳ 109ನೇ ಜನ್ಮದಿನೋತ್ಸವ ಅಂಗವಾಗಿ ಜಿಲ್ಲಾಧ್ಯಕ್ಷರಾದ ಶ್ರೀ ಎ.ಎನ್.ಸದಾಶಿವಯ್ಯ ಮತ್ತು ಮಾನ್ಯ ಶಾಸಕರಾದ ಶ್ರೀ ಎಸ್.ಎನ್.ನಾರಾಯಣಸ್ವಾಮಿಯವರ ಸಮಕ್ಷಮದಲ್ಲಿ ಭಾವಚಿತ್ರಗಳಿಗೆ ಪೂಜೆಮಾಡಿ ಸಿಹಿ ಹಂಚಲಾಯಿತು. ನಂತರ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಬ್ರೆಡ್ ಮತ್ತು ಹಣ್ಣುಗಳನ್ನು ವಿತರಿಸಿ, ಅನ್ನಧಾನ ಏರ್ಪಡಿಸಲಾಗಿತ್ತು.
- ದಿನಾಂಕ: 6–5–2016 ರಿಂದ 9–5–2016ರವರೆವಿಗೆ ಶ್ರೀ ಬಸವೇಶ್ವರ ಜಯಂತೋತ್ಸವದ ಅಂಗವಾಗಿ ಪ್ರತಿದಿನ ನಾಡಿನ ಪ್ರಖ್ಯಾತಿ ಪಡೆದ ಕಲಾವಿದರಿಂದ ನೃತ್ಯರೂಪಕ, ಭರತನಾಟ್ಯ, ಜಾನಪದ ನೃತ್ಯರೂಪಕ, ವಚನಗಾಯನ ಮತ್ತು ಸುಗಮ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.
- ಬಸವಜಯಂತಿ ಅಂಗವಾಗಿ ನ್ಯೂ ಇಂಡಿಯನ್ ಡ್ಯಾನ್ಸ್ ಇನ್ಸ್‌ಟಿಟ್ಯೂಟ್ ಇವರಿಂದ ಭಕ್ತಪ್ರಹ್ಲಾದ ನಾಟಕವನ್ನು ಏರ್ಪಡಿಸಲಾಗಿತ್ತು. ಅನ್ನಪೂರ್ಣೇಶ್ವರಿ ಜಾನಪದ ಕಲಾತಂಡ ಇವರಿಂದ ಜಾನಪದ, ಭಾವಗೀತೆ, ಭಕ್ತಿಗೀತೆ ಮತ್ತು ವಚನಗಳ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಹಾಗೇಯೇ ಸೂರ್ಯ ಆರ್ಟ್ಸ್ ಇಂಟರ್ ನ್ಯಾಷನಲ್ ಕ್ರಿಯೇಷನ್ಸ್, ಬೆಂಗಳೂರು ಇವರಿಂದ ಬಸವಣ್ಣನವರ ನೃತ್ಯರೂಪಕ ಏರ್ಪಡಿಸಲಾಗಿತ್ತು.
- ದಿನಾಂಕ: 9–5–2016ರಂದು ಅಕ್ಷಯ ತೃತೀಯ ದಿನದಂದು ಬಸವೇಶ್ವರ ಸ್ವಾಮಿಗೆ ರುದ್ರಾಭಿಷೇಕ ಹಾಗೂ ಮಧ್ಯಾಹ್ನ ಅನ್ನದಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸಂಜೆ ಶ್ರೀ ಅಶ್ವಾರೂಡ ಬಸವೇಶ್ವರ ಸ್ವಾಮಿಯ ಮುತ್ತಿನ ಪಲ್ಲಕ್ಕಿ ಉತ್ಸವದ ಮೆರವಣಿಗೆಯನ್ನು ಸ್ಥಳೀಯ ಶಾಸಕರಾದ ಶ್ರೀ ಎಸ್.ಎನ್.ನಾರಾಯಣಸ್ವಾಮಿಯವರು ಉದ್ಘಾಟಿಸಿದರು. ಮೆರವಣಿಗೆಯಲ್ಲಿ ವೀರಗಾಸೆ, ಕರಡಿಮಜಲು ಇತ್ಯಾದಿ ಕಲಾತಂಡಗಳು ಭಾಗವಹಿಸಿದ್ದವು.
- ದಿನಾಂಕ 7–9–2016 ರಿಂದ 10–9–2016 ರವರೆಗೆ ಶ್ರೀ ಬಸವೇಶ್ವರಸ್ವಾಮಿ ದೇವಾಲಯದಲ್ಲಿ ಗೌರಿ–ಗಣೇಶ ಹಬ್ಬವನ್ನು ಆಚರಿಸಿ, 3 ದಿನಗಳ ಕಾಲ ಶ್ರೀ ಷಷ್ಠಿ ಕೇದಾರ ಗೌರಿ ವ್ರತವನ್ನು ಆಚರಿಸಿ, ಪ್ರಸಾದದ ವ್ಯವಸ್ಥೆಯನ್ನು ಆಯೋಜಿಸಲಾಗಿತ್ತು.

- ದಿನಾಂಕ 1–10–2016 ರಿಂದ 11–10–2016 ರವರೆಗೆ ನವರಾತ್ರಿಯ ವಿಶೇಷ ಅಲಂಕಾರ ಹನ್ನೊಂದು ದಿನಗಳ ಕಾಲ ಶ್ರೀ ಬಸವೇಶ್ವರಸ್ವಾಮಿಗೆ ವಿವಿಧ ರೀತಿಯ ಅಲಂಕಾರಗಳೊಂದಿಗೆ ಪೂಜಾ ಕಾರ್ಯಕ್ರಮ ಹಾಗೂ ಪ್ರಸಾದದ ವ್ಯವಸ್ಥೆಯನ್ನು ಆಯೋಜಿಸಲಾಗಿತ್ತು.
- ದಿನಾಂಕ 12–2–2017ರಂದು2015–16ನೇ ಸಾಲಿನ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ.ವಿದ್ಯಾರ್ಥಿಗಳಿಗೆ **'ಪ್ರತಿಭಾ ಪುರಸ್ಕಾರ'** ಸಮಾರಂಭವನ್ನು ಆಯೋಜಿಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಗೌರವಿಸಲಾಯಿತು. ಸಮಾರಂಭವನ್ನು ಮಹಾಸಭೆಯ ಉಪಾಧ್ಯಕ್ಷರಾದ ಶ್ರೀಮತಿ ಮಧುರಾ ಅಶೋಕಕುಮಾರ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಸ್.ವಾಗೀಶ್ ಪ್ರಸಾದ್ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮಹಾಸಭೆಯ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.
- ದಿನಾಂಕ: 23–03–2017ರಂದು ಡಾ.ಶ್ರೀಶ್ರೀ ಶಿವಕುಮಾರ ಸ್ವಾಮಿಗಳ 110ನೇ ಜನ್ಮದಿನೋತ್ಸವ ಅಂಗವಾಗಿ ಶ್ರೀಗಳ ಶೋಭಾಯಾತ್ರೆಯು ಪಟ್ಟಣಕ್ಕೆ ಆಗಮಿಸಿದಾಗ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ವಿಜೃಂಭಣೆಯಿಂದ ನೆರವೇರಿಸಲಾಯಿತು.
- ಪ್ರತಿವರ್ಷದಂತೆ ಈ ಸಾರಿಯು ದೀಪಾವಳಿ ಹಬ್ಬದಂದು ದೇವಸ್ಥಾನದಲ್ಲಿ ಕೇದಾರೇಶ್ವರ ನೊಂಪಿ ಹಬ್ಬವನ್ನು ಆಚರಿಸಲಾಯಿತು. ಹಾಗೇಯೇ ಲಕ್ಷದೀಪೋತ್ಸವ, ಸಂಕ್ರಾಂತಿ, ಭಾರತ ಹುಣ್ಣಿಮೆ ಮತ್ತು ಶಿವರಾತ್ರಿ ಹಬ್ಬಗಳನ್ನು ಬಹಳ ವಿಜೃಂಭಣೆಯಿಂದ ನೆರವೇರಿಸಲಾಯಿತು.
- ದಿನಾಂಕ: 17–7–2016ರಂದು ಬಿ.ಇ.ಎಂ.ಎಲ್. ಕೆ.ಜಿ.ಎಫ್ ವಿಭಾಗದಲ್ಲಿರುವ ಶ್ರೀ ಬಸವ ಸಮಿತಿ (ರಿ.)ಆಶ್ರಯದಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರ ಹಾಗೂ ಶರಣೆ ಅಕ್ಕಮಹಾದೇವಿಯವರ ಭಾವಚಿತ್ರಗಳನ್ನು ವೀರಗಾಸೆ, ಕರಡಿ ಮಜಲುಗಳೊಂದಿಗೆ ಅದ್ದೂರಿ ಮೆರವಣಿಗೆ ಮಾಡಲಾಯಿತು. ಬಿ.ಇ.ಎಂ.ಎಲ್. ಕಲಾಕ್ಷೇತ್ರದಲ್ಲಿ ಪ್ರತಿಭಾಪುರಸ್ಕಾರ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಬಹಳ ವಿಜೃಂಭಣೆಯಿಂದ ನಡೆಯಿತು.
- ಬಂಗಾರಪೇಟೆ ತಾಲ್ಲೂಕು ಕೆಸರನಹಳ್ಳಿ ಗ್ರಾಮದಲ್ಲಿ 52ನೇ ವರ್ಷದ ಬಸವೇಶ್ವರ ಜಯಂತಿಯನ್ನು ಎರಡು ದಿನಗಳ ಕಾಲ ಕ್ರಮವಾಗಿ ಶ್ರೀ ಬಸವಣ್ಣನವರ ನೃತ್ಯ ರೂಪಕ ಮತ್ತು ಪಲ್ಲಕ್ಕಿ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.
- ದಿನಾಂಕ 22–4–2016 ರಂದು ಅಕ್ಕನ ಬಳಗದ ಆಶ್ರಯದಲ್ಲಿ ಪ್ರತಿ ವರ್ಷದಂತೆ ಈ ಸಾರಿಯು **'ಪರಮ ವೈರಾಗ್ಯನಿಧಿ ಅಕ್ಕಮಹಾದೇವಿ ಜಯಂತಿ'** ಆಚರಿಸಲಾಯಿತು. ಸಮಾಜದ ಶರಣ/ಶರಣೆಯರೆಲ್ಲರೂ ಕೂಡಿ ಅಕ್ಕಮಹಾದೇವಿಗೆ ಅಭಿಷೇಕ, ಪುಷ್ಪಾರ್ಚನೆ ಹಾಗೂ ಸಾಮೂಹಿಕ ಪ್ರಾರ್ಥನೆ ಮತ್ತು ಪ್ರಸಾದದ ವ್ಯವಸ್ಥೆ ಆಯೋಜಿಸಲಾಗಿತ್ತು.
- ಪ್ರತಿ ಹುಣ್ಣಿಮೆ ದಿನದಂದು ಶರಣೆಯರೆಲ್ಲಾ ಒಟ್ಟಿಗೆ ಸೇರಿ ಸಾಮೂಹಿಕ ಪ್ರಾರ್ಥನೆ ಹಾಗೂ ಅಕ್ಕಮಹಾದೇವಿಗೆ ವಿಶೇಷ ಪೂಜೆ ಹಾಗೂ ಪ್ರಸಾದದ ಕಾರ್ಯಕ್ರಮಗಳನ್ನು ನಡೆಸಲಾಯಿತು.
- ಪ್ರತಿ ವರ್ಷದಂತೆ ಈ ಸಾರಿಯು ಬಡ ಹೆಣ್ಣುಮಕ್ಕಳಿಗೆ ಹೊಲಿಗೆ ಶಾಲೆ ಹಾಗೂ ವಾತ್ಸಲ್ಯ ಮಕ್ಕಳ ಪೋಷಣಾ ಕೇಂದ್ರ ಶಾಲೆಗಳನ್ನು ಪ್ರಾರಂಭಿಸಿ ನಡೆಸಿಕೊಂಡು ಬರಲಾಗುತ್ತಿದೆ. 15 ವರ್ಷದ ಒಳಪಟ್ಟ ಮಕ್ಕಳಿಗೆ ವಚನ ಗಾಯನ ಸ್ಪರ್ಧೆ ಏರ್ಪಡಿಸಿದ್ದು ವಿಜೇತರಿಗೆ ಬಹುಮಾನಗಳನ್ನು ನೀಡಲಾಯಿತು.

- ಮುಳಬಾಗಿಲು ತಾಲ್ಲೂಕು ಘಟಕದ ವತಿಯಿಂದ 1–4–2016ರಂದು ಶ್ರೀ ಸಿದ್ಧಗಂಗಾ ಶ್ರೀಗಳವರ 109ನೇ ವರ್ಷದ ಹುಟ್ಟುಹಬ್ಬವನ್ನು ತಾಲ್ಲೂಕಿನ ಪ್ರಮುಖರೆಲ್ಲರೂ ಕೂಡಿ ಶ್ರೀಗಳವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಸಿಹಿ ಹಂಚಿ ಆಚರಿಸಲಾಯಿತು.

- ದಿನಾಂಕ 9–5–2016ರಂದು ಬಸವ ಜಯಂತಿಯನ್ನು ಬಸವೇಶ್ವರ ಭಕ್ತ ಮಂಡಲಿ ಮತ್ತು ಅಖಿಲ ಭಾರತ ವೀರಶೈವ ಮಹಾಸಭಾದ ವತಿಯಿಂದ ಆಚರಿಸಲಾಯಿತು. ಧ್ವಜ ಕುಣಿತ ಪಲ್ಲಕ್ಕಿ ಸಹಿತವಾಗಿ ಕೋಲಾರ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯನ್ನು ಆಚರಿಸಲಾಯಿತು.

- ಮುಳಬಾಗಿಲು ತಾಲ್ಲೂಕು ವೀರಶೈವ ಟ್ರಸ್ಟ್ ಆಶ್ರಯದಲ್ಲಿ **'ಬಸವೇಶ್ವರ ಜಯಂತಿ'** ಕಾರ್ಯಕ್ರಮವನ್ನು ದಿನಾಂಕ 9–5–2016ರಂದು ಹಮ್ಮಿಕೊಳ್ಳಲಾಗಿತ್ತು. ಇದರ ಪ್ರಯುಕ್ತ ಪ್ರತಿ ವರ್ಷದಂತೆ ಸೂರ್ಯೋದಯ ಪೂರ್ವ ವೀರಭದ್ರಸ್ವಾಮಿ ಮತ್ತು ಭದ್ರಕಾಳಿ ಅಮ್ಮನವರಿಗೆ ವಿಶೇಷ ಪೂಜೆಯನ್ನು ನೆರವೇರಿಸಲಾಯಿತು. ಮುಳಬಾಗಿಲು ತಹಸೀಲ್ದಾರ್ ಮತ್ತು ತಾಲ್ಲೂಕು ದಂಡಾಧಿಕಾರಿಗಳು ಇವರ ಕಛೇರಿಯಲ್ಲಿ **'ಬಸವೇಶ್ವರ ಜಯಂತಿ'** ಕಾರ್ಯಕ್ರಮವನ್ನು ಬೆಳಗ್ಗೆ 10.00 ಗಂಟೆಗೆ ಶ್ರೀ ಬಸವೇಶ್ವರಸ್ವಾಮಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಆಚರಿಸಲಾಯಿತು. ವಿಶೇಷ ಆಹ್ವಾನಿತರಾಗಿ ಶ್ರೀ ಜಿ.ಮಂಜುನಾಥ್, ಶಾಸಕರು ಹಾಗೂ ಇನ್ನೂ ಅನೇಕ ಗಣ್ಯ ವಕ್ತಿಗಳು ಭಾಗವಹಿಸಿದ್ದರು.

- ಕೋಲಾರ ತಾಲ್ಲೂಕು ಘಟಕದಿಂದ ಹಾಗೂ ಬಸವೇಶ್ವರ ಭಕ್ತಮಂಡಳಿ ಸಹಯೋಗದೊಂದಿಗೆ ದಿನಾಂಕ: 9–5–2016ರಂದು ಶ್ರೀ ಬಸವೇಶ್ವರ ಜಯಂತೋತ್ಸವದ ಅಂಗವಾಗಿ ಎರಡು ದಿನಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಂಡು ಶ್ರೀ ಬಸವೇಶ್ವರರ ಪಲ್ಲಕ್ಕಿಯನ್ನು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

- ಕೋಲಾರದ ಅಕ್ಕನಬಳಗ ಹಾಗೂ ಮಹಾಸಭೆಯ ಸದಸ್ಯರೆಲ್ಲರು ಸೇರಿ ದಿನಾಂಕ: 22–4–2016ರಂದು ಅಕ್ಕಮಹಾದೇವಿಯ ಜಯಂತಿಯನ್ನು ಆಚರಿಸಲಾಯಿತು. ನಂತರ ಅಕ್ಕಮಹಾದೇವಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಅರ್ಪಿಸಿ, ಪ್ರಸಾದ ವಿನಿಯೋಗಿಸಲಾಯಿತು.

- ಕೋಲಾರ ತಾಲ್ಲೂಕು ಘಟಕದಿಂದ ದಿನಾಂಕ: 8–4–2016ರಂದು ಅಲ್ಲಮಪ್ರಭುಗಳ ಜಯಂತೋತ್ಸವವನ್ನು ಬಸವೇಶ್ವರರ ದೇವಸ್ಥಾನದಲ್ಲಿ ಆಚರಿಸಲಾಯಿತು.

- ಕೋಲಾರ ತಾಲ್ಲೂಕು ಘಟಕದಿಂದ ದಿನಾಂಕ: 1–4–2016ರಂದು ಶ್ರೀ ಸಿದ್ಧಗಂಗಾಶ್ರೀಗಳ 110ನೇ ವರ್ಷದ ಹುಟ್ಟುಹಬ್ಬವನ್ನು ಗಾಂಧಿಚೌಕದಲ್ಲಿ ಆಚರಿಸಲಾಯಿತು.

- ಶ್ರೀನಿವಾಸಪುರ ತಾಲ್ಲೂಕ್ ಘಟಕದ ವತಿಯಿಂದ ಜಂಗಮಗುಜೇನಹಳ್ಳಿಯಲ್ಲಿ **'ವಿಶ್ವಗುರು ಬಸವಣ್ಣ'**ನವರ ಮತ್ತು **'ಸಿದ್ಧಗಂಗಾ ಶ್ರೀ'**ಗಳವರ 110ನೇ ವರ್ಷದ ಜನ್ಮದಿನವನ್ನು ಬಹಳ ಸಡಗರ–ಸಂಭ್ರಮ–ಸಂತೋಷದಿಂದ ಅದ್ದೂರಿಯಾಗಿ ಆಚರಣೆ ಮಾಡಲಾಯಿತು.

- ಮಾಲೂರು ತಾಲ್ಲೂಕ್ ಘಟಕದ ವತಿಯಿಂದ **'ಶ್ರೀ ಜಗಜ್ಯೋತಿ ಬಸವೇಶ್ವರರ ಜಯಂತಿ'**ಯನ್ನು ವೀರಗಾಸೆ ಕುಣಿತ, ನಂದಿಧ್ವಜಗಳೊಂದಿಗೆ ವಿಜೃಂಭಣೆಯಿಂದ ಆಚರಿಸಲಾಯಿತು.

**ಮೈಸೂರು ಜಿಲ್ಲೆ:–**

- ಮೈಸೂರು ಜಿಲ್ಲಾ ಘಟಕವು 2016–17ನೇ ಸಾಲಿನಲ್ಲಿ 12 ಮಾಸಿಕ ಸಭೆಗಳನ್ನು ನಡೆಸಿ ಪ್ರತಿ ತಿಂಗಳ 2ನೇ ಶನಿವಾರ ನಿಯಮಬದ್ಧವಾಗಿ ಸಭೆ ಸೇರಿ ಸಮಾಜದ ಸಂಘಟನೆಯ ಬಗ್ಗೆ, ಸಮಾಜದ ಆಗು–ಹೋಗುಗಳ ಬಗ್ಗೆ

ಚರ್ಚಿಸುತ್ತ ಸಮಿತಿಯ ಸದಸ್ಯರ ಅಭಿಪ್ರಾಯದಂತೆ ಆಯಾ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ನಿವಾರಿಸುವ ದಿಕ್ಕಿನಲ್ಲಿ ಜಿಲ್ಲಾ ಸಮಿತಿಯು ಕಾರ್ಯನಿರ್ವಹಿಸುತ್ತಿದೆ. ಅಂತೆಯೇ ಜಿಲ್ಲೆಯ ಎಲ್ಲಾ ತಾಲ್ಲೂಕು ಘಟಕಗಳು ಸಕ್ರಿಯವಾಗಿ ಸಮಾಜದ ಸಂಘಟನೆಯ ದೃಷ್ಟಿಯಿಂದ, ಮಹಾಸಭಾದ ಆಶಯದಂತೆ ಸದಸ್ಯತ್ವ ನೋಂದಣಿ ಮತ್ತು ತಾಲ್ಲೂಕು ಘಟಕಗಳಿಗೆ ನಿವೇಶನ ಹೊಂದುವ ಬಗ್ಗೆ ಹಾಗೂ ಬಸವ ಭವನ ನಿರ್ಮಿಸುವ ಬಗ್ಗೆ ಪ್ರಯತ್ನಗಳಾಗಬೇಕೆಂದು ಜಿಲ್ಲಾ ಘಟಕ ಮಾರ್ಗದರ್ಶನ ಮಾಡುತ್ತಿದೆ. ನಂಜನಗೂಡು, ಹೆಚ್.ಡಿ.ಕೋಟೆ, ಕೆ.ಆರ್.ನಗರ, ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಈಗಾಗಲೇ ನಿವೇಶನ ಹೊಂದಲಾಗಿದೆ. ಅಲ್ಲದೇ ಟಿ.ನರಸೀಪುರದಲ್ಲಿ ಬಸವ ಭವನ ನಿರ್ಮಿಸಲಾಗಿದೆ. ಉಳಿದಂತೆ ಮೈಸೂರು ಜಿಲ್ಲೆ ಹಾಗೂ ಹುಣಸೂರು, ಮೈಸೂರು ತಾಲ್ಲೂಕುಗಳಲ್ಲಿ ನಿವೇಶನ ಹೊಂದುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

- ಮೈಸೂರು ಜಿಲ್ಲಾ ಘಟಕದ ವತಿಯಿಂದ ವೀರಶೈವ ಸಂಘ ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟದೊಂದಿಗೆ ದಿನಾಂಕ: 1–4–2016ರಂದು ತ್ರಿವಿಧ ದಾಸೋಹಿ ಡಾ ಶ್ರೀಶ್ರೀ ಶಿವಕುಮಾರ ಸ್ವಾಮಿಗಳವರ 109ನೇ ವರ್ಷದ ಜನ್ಮದಿನಾಚರಣೆಯ ಪ್ರಯುಕ್ತ ಜಿಲ್ಲಾ ಘಟಕದ ಆವರಣದಲ್ಲಿ ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆ ಸಹಯೋಗದೊಂದಿಗೆ ರಕ್ತದಾನ ಶಿಬಿರವನ್ನು ಆಯೋಜಿಸಿ 109 ದಾನಿಗಳಿಂದ 109 ಬಾಟಲ್ ರಕ್ತವನ್ನು ಸಂಗ್ರಹಿಸಿ ಪರಮಪೂಜ್ಯರ ಜನ್ಮದಿನಾಚರಣೆಯನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು.

- ದುರಂತದಲ್ಲಿ ಸಾವಿಗೀಡಾದ ಮೈಸೂರಿನ ಕ್ಯಾತಮಾರನಹಳ್ಳಿ ವೀರಶೈವ ಸಮಾಜದ ಮುಖಂಡರಾದ ದಿ. ರಾಜುರವರ ಕುಟುಂಬಕ್ಕೆ ರೂ. 4,00,000/–ಗಳ ಚೆಕ್ ನೀಡಲಾಯಿತು.

- ಜಿಲ್ಲಾ ಘಟಕವು 2016ರ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಂ.ಹೆಚ್. ಮಹದೇವಸ್ವಾಮಿ ಮತ್ತು ವೀರಶೈವ ಸಂಘ–ಸಂಸ್ಥೆಗಳು ಹಾಗೂ ಬಸವ ಬಳಗಗಳ ಸಹಯೋಗದೊಂದಿಗೆ ಮೇ 9 ರಿಂದ 10ರವರೆಗೆ ಜಿಲ್ಲಾಡಳಿತದ ಸಹಯೋಗದೊಂದಿಗೆ ಮೈಸೂರಿನ ಕಲಾಮಂದಿರದಲ್ಲಿ **'ಬಸವ ಜಯಂತಿ'**ಯನ್ನು ಶ್ರೀ ಬಸವೇಶ್ವರರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ನಂತರ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ವಿಜೃಂಬಣೆಯಿಂದ ಅರ್ಥಪೂರ್ಣವಾಗಿ ಆಚರಿಸಲಾಯಿತು. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಸಮಾರಂಭವನ್ನು ಉದ್ಘಾಟಿಸಿದರು. ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ಪೂಜ್ಯ ನಿ.ಪ್ರ.ಸ್ವ. ಶ್ರೀ ಡಾ.ಶರತ್‌ಚಂದ್ರ ಸ್ವಾಮಿಗಳು ಷಟಸ್ಥಲ ಧ್ವಜಾರೋಹಣ ನೆರವೇರಿಸಿದರು. ಮೈಸೂರು ಮಹಾಪೌರರಾದ ಶ್ರೀ ಬಿ.ಎಲ್.ಭೈರಪ್ಪ ಮತ್ತು ಮೈಸೂರು ಜಿಲ್ಲಾ ಪಂಚಾಯ್ತಿ ಅಧ್ಯಕ್ಷರು ಮೆರವಣಿಗೆಯನ್ನು ಉದ್ಘಾಟಿಸಿದರು.

- ನಂದಿ ಧ್ವಜದ ಪೂಜೆಯೊಂದಿಗೆ ಮೆರವಣಿಗೆ ಉದ್ಘಾಟನೆಯು ಶ್ರೀ ಬಸವೇಶ್ವರ ಪುತ್ಥಳಿ ಬಳಿಯಲ್ಲಿ ನಡೆಯಿತು.ಮೆರವಣಿಗೆಯಲ್ಲಿ ವೀರಗಾಸೆ, ಸ್ಥಬ್ಧಚಿತ್ರಗಳು, ಭಜನಾಮೇಳ, ಮಂಗಳವಾದ್ಯ, ಕೊಂಬು, ಕಹಳೆ, ಪೂಜಾ ಕುಣಿತ, ಮಕ್ಕಳ ಕುಣಿತ, ಗೊರವರ ಕುಣಿತ, ನಗಾರಿ ಡೋಲು, ಕಂಸಾಳೆ ಸಮೇತ ಭಾವಚಿತ್ರಗಳನ್ನು ಹೊತ್ತ ಅಲಂಕೃತ ವಾಹನದಲ್ಲಿ ವಚನಸಾಹಿತ್ಯಗಳೊಂದಿಗೆ ವೈಭವಯುತವಾಗಿ ಅರ್ಥಪೂರ್ಣವಾಗಿ ಮಾದರಿ ಜಂಬೂಸವಾರಿಯಂತೆ ಜರುಗಿತು.

- 2015ನೇ ಸಾಲಿನ ಬಸವ ರಾಷ್ಟ್ರೀಯ ಪುರಸ್ಕಾರವನ್ನು ಶ್ರೀ ಗೊ.ರು.ಚನ್ನಬಸಪ್ಪ, ಅಧ್ಯಕ್ಷರು, ಶರಣ ಸಾಹಿತ್ಯ ಪರಿಷತ್, ಬೆಂಗಳೂರು ಇವರಿಗೆ ಕರ್ನಾಟಕ ಸರ್ಕಾರದ ಸಹಯೋಗದೊಂದಿಗೆ ನೀಡಲಾಯಿತು. ಗಾವಡಗೆರೆಯ ಶ್ರೀ ಗುರುಲಿಂಗಜಂಗಮದೇವರ ಮಠಾಧ್ಯಕ್ಷರಾದ ಷ.ಬ್ರ.ಶ್ರೀ ನಟರಾಜಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಹಿರಿಯ

ಚಲನಚಿತ್ರ ಕಲಾವಿದರಾದ ಶ್ರೀ ದೊಡ್ಡಣ್ಣನವರ ಅಧ್ಯಕ್ಷತೆಯಲ್ಲಿ ಬಹುಭಾಷಾ ಚಿತ್ರನಟರು ಹಾಗೂ ನೃತ್ಯ ನಿರ್ದೇಶಕರಾದ ಶ್ರೀ ಪ್ರಭುದೇವ್‌ರವರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಉದ್ಘಾಟಿಸಿದರು. ಬಳಗದ ಮಹಿಳಾ ಮತ್ತು ಮಕ್ಕಳ ಸಮಿತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಶ್ರೀ ಚಕ್ರವರ್ತಿ ಸೂಲಿಬೆಲೆಯವರಿಂದ ಹುತಾತ್ಮ ವೀರಯೋಧರಾದ ಶ್ರೀ ಮಹೇಶ್ ಮತ್ತು ಶ್ರೀ ಹನುಮಂತಪ್ಪ ಕೊಪ್ಪದ್ ಇವರುಗಳ ಕುಟುಂಬಕ್ಕೆ **"ಯೋಧ ನಮನ"** ಎನ್ನುವ ಕಾರ್ಯಕ್ರಮದ ಮೂಲಕ ಗೌರವ ಸಮರ್ಪಣೆಯನ್ನು ವಿಶೇಷವಾಗಿ ಏರ್ಪಡಿಸಲಾಗಿತ್ತು.

- ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ಕಿರಿಯ ಮಠಾಧ್ಯಕ್ಷರಾದ ಪೂಜ್ಯ ನಿ.ಪ್ರ.ಸ್ವ. ಶ್ರೀ ಸಿದ್ದಲಿಂಗಮಹಾಸ್ವಾಮಿಗಳವರ ಸಮ್ಮುಖದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರುಗಳಾದ ಶ್ರೀ ಶಂಕರಮಹಾದೇವ ಬಿದರಿ (ಆರಕ್ಷಕ ಕ್ಷೇತ್ರ), ಡಾ ಬಸವನಗೌಡಪ್ಪ (ವೈದ್ಯಕೀಯ ಕ್ಷೇತ್ರ), ಶ್ರೀ ಪ್ರಭುದೇವ(ಚಲನಚಿತ್ರ ಕ್ಷೇತ್ರ), ಶ್ರೀ ಎಂ.ರೇಚಣ್ಣ (ಕೃಷಿ ಕ್ಷೇತ್ರ) ಇವರುಗಳನ್ನು ಸನ್ಮಾನಿಸಲಾಯಿತು. ಸಂಜೆ 7 ಗಂಟೆಗೆ ಬೆಂಗಳೂರಿನ ಶ್ರೀಮತಿ ಮಂಜುಳ ಪರಮೇಶ್ ಮತ್ತು ತಂಡದವರಿಂದ ವಚನ ಸಂಭ್ರಮ–ನೃತ್ಯರೂಪಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

- ನಂಜನಗೂಡು, ಹುಣಸೂರು, ಹೆಚ್.ಡಿ.ಕೋಟೆ ತಾಲ್ಲೂಕು ಘಟಕಗಳಿಂದ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಬಸವ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಟಿ.ನರಸೀಪುರ, ಪಿರಿಯಾಪಟ್ಟಣ ಮತ್ತು ಕೆ.ಆರ್.ನಗರ ತಾಲ್ಲೂಕು ಘಟಕಗಳು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ಸಹಯೋಗದೊಂದಿಗೆ ಸಾಂಕೇತಿಕವಾಗಿ ಬಸವ ಜಯಂತಿಯನ್ನು ಆಚರಿಸಲಾಯಿತು.

- ಮೈಸೂರು ಜಿಲ್ಲಾ ಘಟಕದ ವತಿಯಿಂದ ದಿನಾಂಕ 8–10–2016ರಂದು ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ **'ಪ್ರತಿಭಾ ಪುರಸ್ಕಾರ'** ಕಾರ್ಯಕ್ರಮವನ್ನು ಶ್ರೀ ಸುತ್ತೂರು ಮಠದ ಆವರಣ, ಚಾಮುಂಡಿ ಬೆಟ್ಟದ ತಪ್ಪಲು, ಮೈಸೂರು ಇಲ್ಲಿ ಆಯೋಜಿಸಲಾಯಿತು. ಸಮಾರಂಭದ ಸಾನಿಧ್ಯವನ್ನು ಶ್ರೀಕ್ಷೇತ್ರ ಮಲ್ಲನಮೂಲೆ ಮಠಾಧ್ಯಕ್ಷರಾದ ಪೂಜ್ಯಶ್ರೀ ಚನ್ನಬಸವಸ್ವಾಮಿಗಳು ವಹಿಸಿದ್ದರು. ಮೈಸೂರು ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಶ್ರೀಯುತ ಹೆಚ್.ವಿ.ಬಸವರಾಜು ಹಿನಕಲ್‌ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಮಹಾಸಭೆಯ ಹಿರಿಯ ಉಪಾಧ್ಯಕ್ಷರಾದ ಶ್ರೀ ಎನ್.ತಿಪ್ಪಣ್ಣನವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಮಹಾಸಭೆಯ ಕೋಶಾಧ್ಯಕ್ಷರಾದ ಶ್ರೀಮತಿ ಸುನಂದ ಗಿರೀಶ್, ರಾಷ್ಟ್ರ ಮಹಿಳಾ ಸಮಿತಿ ಅಧ್ಯಕ್ಷರಾದ ಶ್ರೀಮತಿ ಗೀತಾ ಜಯಂತ್, ಮೈಸೂರು ಪಂಚಾಯತ್ ಉಪಾಧ್ಯಕ್ಷರಾದ ಶ್ರೀ ಕಯ್ಯಂಬಳ್ಳಿ ನಟರಾಜು ಭಾಗವಹಿಸಿದ್ದರು. ಜಿಲ್ಲೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಸುಮಾರು 262 ಪ್ರತಿಭಾವಂತ ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳಿಗೆ ಮಹಾಸಭೆಯು ನೀಡಿದಕರಡಿಗೆ, ಚೆಕ್ ಹಾಗೂ ಪ್ರಶಸ್ತಿ ಪತ್ರಗಳನ್ನು ವಿತರಿಸಿ ಗೌರವಿಸಲಾಯಿತು. ಡಾ. ನಂದೀಶ್ ಹಂಚೆಯವರು ಪುರಸ್ಕೃತ ವಿದ್ಯಾರ್ಥಿಗಳನ್ನು ಕುರಿತು ಶುಭನುಡಿಗಳನ್ನಾಡಿದರು.

- ಕರ್ನಾಟಕ ರಾಜ್ಯದಿಂದ ಮೈಸೂರು ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಕವಾದ ಶ್ರೀಮತಿ ಮಲ್ಲಿಗೆ ವೀರೇಶ್‌ರವರನ್ನು, ಹೆಚ್.ಡಿ.ಕೋಟೆ, ಮೈಸೂರು ಮತ್ತು ಪಿರಿಯಾಪಟ್ಟಣ ತಾಲ್ಲೂಕುಗಳ ನೂತನ ಅಧ್ಯಕ್ಷರುಗಳನ್ನು, 2017ರ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಟಿ.ಎಸ್.ಲೋಕೇಶ್ ಮತ್ತು ಕದಂಬ ಪ್ರಶಸ್ತಿಗೆ ಭಾಜನರಾದ ಶ್ರೀ ಹೆಚ್.ವಿ.ಬಸವರಾಜು ಹಿನಕಲ್ ಇವರುಗಳನ್ನು ಜಿಲ್ಲಾ ಘಟಕದ ವತಿಯಿಂದ ಹೃದಯಪೂರ್ವಕವಾಗಿ ಅಭಿನಂದಿಸಲಾಯಿತು.

- ದಿನಾಂಕ: 30–8–2016ರಂದು ಹುಬ್ಬಳ್ಳಿಯಲ್ಲಿ ಏರ್ಪಡಿಸಿದ್ದ ಲಿಂಗೈಕ್ಯ ಎಂ.ಎಂ.ಕಲಬುರ್ಗಿಯವರ ಒಂದನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಸಾಹಿತಿ ಚಂದ್ರಶೇಖರ ಪಾಟೀಲರು "ವೀರಶೈವ–ಲಿಂಗಾಯತರು ಕೋಮು ಗಲಭೆಗೆ ಕಾರಣ" ಎಂದು ಹೇಳಿಕೆ ನೀಡಿದ್ದನ್ನು ಪತ್ರಿಕಾ ಪ್ರಕಟಣೆ ನೀಡುವ ಮೂಲಕ ಖಂಡಿಸಿ ಎಚ್ಚರಿಸಲಾಯಿತು.

- ಬಿಜಾಪುರ ತಾಲ್ಲೂಕಿನ ನಿಡೋಣಿ ಗ್ರಾಮದಲ್ಲಿ ಶ್ರೀ ಬಸವೇಶ್ವರರ ಪ್ರತಿಮೆಗೆ ರಾತ್ರಿ ಸಮಯದಲ್ಲಿ ದುಷ್ಕರ್ಮಿಗಳು ಚಪ್ಪಲಿ ಹಾರ ಹಾಕಿ ಅವಮಾನಗೊಳಿಸಿರುವ ಘಟನೆಯನ್ನು ಖಂಡಿಸಿ ದುಷ್ಕರ್ಮಿಗಳನ್ನು ಬಂಧಿಸುವಂತೆ ಮಹಾಸಭೆಯ ಮೈಸೂರು ಜಿಲ್ಲಾ, ತಾಲ್ಲೂಕು, ನಗರ ಘಟಕಗಳು, ಯುವ ಮತ್ತು ಮಹಿಳಾ ವಿಭಾಗಗಳೊಂದಿಗೆ ಜಿಲ್ಲೆಯ ಸಮಸ್ತ ಬಸವಾಭಿಮಾನಿಗಳೊಂದಿಗೆ ನಗರದ ರಾಮಾನುಜ ರಸ್ತೆಯ ಡಾ. ಶಿವರಾತ್ರಿ ರಾಜೇಂದ್ರ ವೃತ್ತದಲ್ಲಿರುವ ಶ್ರೀ ಬಸವೇಶ್ವರರ ಪುತ್ಥಳಿ ಆವರಣದಿಂದ ಪ್ರತಿಭಟನಾ ಮೆರವಣಿಗೆಯು ಹೊರಟು ನಗರದ ಪ್ರಮುಖ ಬೀದಿಗಳ ಮುಖಾಂತರ ಜಿಲ್ಲಾಧಿಕಾರಿಗಳ ಕಛೇರಿ ತಲುಪಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

- ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜನ್ಮ ಶತಮಾನೋತ್ಸವದ ಪ್ರಯುಕ್ತ ದಕ್ಷಿಣ ಭಾರತದ ರಾಜ್ಯಗಳ ಉದ್ದಗಲಕ್ಕೂ ಸಂಚರಿಸುತ್ತಿದ್ದ ರಾಜೇಂದ್ರ ಜ್ಯೋತಿರಥಯಾತ್ರೆಯನ್ನು ದಿನಾಂಕ: 10–8–2016 ರಂದು ಸ್ವಾಗತಿಸಿಕೊಂಡು 29–8–2016ರವರೆಗೆ ಮೈಸೂರು ಜಿಲ್ಲೆಯಾದ್ಯಂತ ಸಂಚರಿಸುವ ಮೂಲಕ ಭಕ್ತಿ ಸಮರ್ಪಣೆ ಮಾಡಲಾಯಿತು.

- ಮೈಸೂರು ತಾಲ್ಲೂಕು ಘಟಕದ ವತಿಯಿಂದ 2016ರ ನವೆಂಬರ್ ಮಾಹೆಯ ಕಡೇ ಕಾರ್ತೀಕ ಸೋಮವಾರದಂದು ಶ್ರೀ ಮಲೈಮಹದೇಶ್ವರ ಬೆಟ್ಟಕ್ಕೆ ಬರುವ ಸುಮಾರು ಹತ್ತರಿಂದ ಹದಿನೈದು ಸಾವಿರ ಭಕ್ತಾದಿಗಳಿಗೆ ದಾಸೋಹ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು.ಈ ವ್ಯವಸ್ಥೆಯು ನಿರಂತರವಾಗಿ ಸುಮಾರು 20 ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿದೆ. ಇದೇ ಸಂದರ್ಭದಲ್ಲಿ ಭಕ್ತಿಪ್ರಧಾನವಾದ ಪೌರಾಣಿಕ ನಾಟಕಗಳನ್ನು ಏರ್ಪಡಿಸಲಾಗಿತ್ತುಹಾಗೂ ಶ್ರೀ ಕೊಂಗಳ್ಳಿ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನಬೆಟ್ಟ, ತಮಿಳುನಾಡು ಇಲ್ಲಿಗೂ ಸಹ ಸಮಾಜ ಮುಖಂಡರ ಪರಿಷೆಯೊಂದಿಗೆ ಆಗಮಿಸಿ ಸೇವೆ ಸಲ್ಲಿಸಲಾಯಿತು.

**ಹಾವೇರಿ ಜಿಲ್ಲೆ :–**

- ಹಾವೇರಿ ಜಿಲ್ಲಾ ಘಟಕದ ಅಧ್ಯಕ್ಷರು ಪದಾಧಿಕಾರಿಗಳು, ಸದಸ್ಯರು, ವೀರಶೈವ ತರುಣ ಸಂಘ, ಬಸವ ಸಮಿತಿ, ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರು ಪದಾಧಿಕಾರಿಗಳು ಹಾಗೂ ಸದಸ್ಯರ ಸಂಯುಕ್ತ ಸಂಘಟನೆಯೊಂದಿಗೆ ಜಗಜ್ಯೋತಿ ಶ್ರೀ ಬಸವೇಶ್ವರ ಮೂರ್ತಿಗೆ ಮಾಲಾರ್ಪಣೆಯೊಂದಿಗೆ ಬಸವ ಭವನದಲ್ಲಿ **'ಶ್ರೀ ಬಸವೇಶ್ವರ ಜಯಂತಿ'**ಯನ್ನು ಆಚರಿಸಲಾಯಿತು. ಮಾನ್ಯ ವಿಧಾನಸಭಾಧ್ಯಕ್ಷರಾಗಿದ್ದ ಶ್ರೀ ಕೆ.ಬಿ.ಕೋಳಿವಾಡರವರು ಕಾರ್ಯಕ್ರಮದ ಅಧ್ಯಕ್ಷತೆ ಮತ್ತು ಉದ್ಘಾಟನೆಯನ್ನು ವಹಿಸಿದ್ದರು. ಮಾನ್ಯ ಜವಳಿ ಹಾಗೂ ಮುಜರಾಯಿ ಖಾತೆ ಸಚಿವರಾದ ಶ್ರೀ ರುದ್ರಪ್ಪ ಲಮಾಣಿಯವರ ಉಪಸ್ಥಿತಿಯಲ್ಲಿ ಸ್ಥಳೀಯ ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು ಹಾಗೂ ಇನ್ನಿತರೇ ಸಮಾಜದ ಗಣ್ಯವ್ಯಕ್ತಿಗಳು ಭಾಗವಹಿಸಿದ್ದರು.

- ಪ್ರತಿ ವರ್ಷದಂತೆ ಈ ವರ್ಷವು ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಶೇಕಡ 90 ಹಾಗೂ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ **'ಪ್ರತಿಭಾ ಪುರಸ್ಕಾರ'**ವನ್ನು ಏರ್ಪಡಿಸಲಾಗಿತ್ತು. ಮಹಾಸಭೆಯ ಕೇಂದ್ರ ಕಛೇರಿಯಿಂದ ಬಂದ ಕರಡಿಗೆ, ಚೆಕ್ ಹಾಗೂ ಪ್ರಶಸ್ತಿ ಪತ್ರಗಳನ್ನು ವಿದ್ಯಾರ್ಥಿಗಳಿಗೆ ನೀಡಿ

ಗೌರವಿಸಲಾಯಿತು.ಸಮಾರಂಭದಲ್ಲಿ ಮಹಾಸಭೆಯ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

- ರಾಣಿಬೆನ್ನೂರು ನಗರದಲ್ಲಿ ಹಾನಗಲ್ ಕುಮಾರಸ್ವಾಮಿಗಳ, ಜಗಜ್ಯೋತಿ ಬಸವೇಶ್ವರರ, ಜಗದ್ಗುರು ರೇಣುಕಾಚಾರ್ಯರ ಹಾಗೂ ಅಕ್ಕಮಹಾದೇವಿಯವರ ಜಯಂತಿಯನ್ನು ಆಚರಿಸಲಾಯಿತು.
- ಸರ್ಕಾರದಿಂದ ಆಚರಿಸಿದ ಬಸವೇಶ್ವರರ ಜಯಂತ್ಯೋತ್ಸವ ಸಮಾರಂಭದಲ್ಲಿ ಹಾವೇರಿ ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀ ಎಂ.ಎಸ್.ಕೋರಿಶೆಟ್ಟರ್, ಕೇಂದ್ರ ಸಮಿತಿ ಸದಸ್ಯರಾದ ಶ್ರೀ ಚಂದ್ರಶೇಖರ ಮುರಿಗೆಪ್ಪ ಸೊಪ್ಪಿನ ಹಾಗೂ ಇನ್ನಿತರೇ ಪದಾಧಿಕಾರಿಗಳು ಭಾಗವಹಿಸಿದ್ದರು.

**ಚಾಮರಾಜನಗರ ಜಿಲ್ಲೆ:–**

- ಪ್ರತಿವರ್ಷದಂತೆ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ.ಪರೀಕ್ಷೆಗಳಲ್ಲಿ ಶೇಕಡ 90 ಹಾಗೂ 90ಕ್ಕಿಂತ ಹೆಚ್ಚು ಅಂಕಗಳಿಸಿದ ಜಿಲ್ಲೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಆಯೋಜಿಸಿ, ಮಹಾಸಭೆಯಿಂದ ಕೊಟ್ಟಂತಹ ಕರಡಿಗೆ, ಚೆಕ್ ಹಾಗೂ ಪ್ರಶಂಸಾ ಪತ್ರಗಳನ್ನು ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಜಿಲ್ಲೆಯ ಜನಪ್ರತಿನಿಧಿಗಳಿಗೂ ಸಹ ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಮಹಾಸಭೆಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಸ್.ವಾಗೀಶ್ ಪ್ರಸಾದ್, ರಾಜ್ಯ ಉಪಾಧ್ಯಕ್ಷರಾದ ಶ್ರೀ ಕೆ.ಎಸ್.ನಾಗರಾಜಪ್ಪ ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.
- ಜಿಲ್ಲಾ ಘಟಕದಿಂದ ನಡೆದಾಡುವ ದೇವರೆಂದೇ ಪ್ರಸಿದ್ಧರಾದ ಸಿದ್ಧಗಂಗಾಮಠದ ಡಾ. ಶ್ರೀಶ್ರೀ ಶಿವಕುಮಾರಸ್ವಾಮಿಗಳ 110ನೇ ವರ್ಷದ ಜಯಂತಿಯನ್ನು ಮಜ್ಜಿಗೆ, ಪಾನಕ ವಿತರಿಸುವ ಮೂಲಕ ವಿಜೃಂಭಣೆಯಿಂದ ಆಚರಿಸಲಾಯಿತು. ಈ ಸಮಾರಂಭದಲ್ಲಿ ಪೂಜ್ಯ ಮಠಾಧೀಶರುಗಳು, ಸಮಾಜದ ಗಣ್ಯವ್ಯಕ್ತಿಗಳು ಹಾಗೂ ಮಹಾಸಭೆಯ ಜಿಲ್ಲಾ, ತಾಲ್ಲೂಕು ಘಟಕಗಳ ಹಾಗೂ ಮಹಿಳಾ ಹಾಗೂ ಯುವವಿಭಾಗಗಳ ಪದಾಧಿಕಾರಿಗಳು ಭಾಗವಹಿಸಿದ್ದರು.
- ಪರಮಪೂಜ್ಯ ಡಾ.ಶ್ರೀಶ್ರೀ ಶಿವಕುಮಾರಸ್ವಾಮಿಗಳ 110ನೇ ಜನ್ಮರಥಯಾತ್ರೆಯು ಜಿಲ್ಲೆಗೆ ಆಗಮಿಸಿದಾಗ ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ, ಯಳಂದೂರು ಪಟ್ಟಣಗಳ ಮುಖ್ಯರಸ್ತೆಗಳಲ್ಲಿ ಕಲಾತಂಡಗಳೊಂದಿಗೆ ವಿಜೃಂಭಣೆಯಿಂದ ರಥಯಾತ್ರೆಯನ್ನು ನಡೆಸಿ ಜಿಲ್ಲೆಯ ಗಡಿಭಾಗದಿಂದ ಬಿಳ್ಕೋಡಲಾಯಿತು.
- ಜಿಲ್ಲಾ ಘಟಕದವತಿಯಿಂದ ಅಕ್ಷಯ ತೃತೀಯದಂದು ಬಸವೇಶ್ವರರ ಭಾವಚಿತ್ರವನ್ನು ಅಲಂಕರಿಸಿ ಪಲ್ಲಕ್ಕಿಯಲ್ಲಿ ಜಿಲ್ಲಾಕೇಂದ್ರದ ಪ್ರವಾಸಿಮಂದಿರದಿಂದ ನಗರದ ಪ್ರಮುಖ ರಸ್ತೆಗಳಲ್ಲಿ ಕಲಾತಂಡಗಳೊಂದಿಗೆ ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಈ ಮೆರವಣಿಗೆಯಲ್ಲಿ ಮಹಾಸಭೆಯ ಸಾವಿರಾರು ಸದಸ್ಯರು, ಸಮಾಜದ ಗಣ್ಯವ್ಯಕ್ತಿಗಳು ಪಾಲ್ಗೊಂಡಿದ್ದರು.
- ಜಿಲ್ಲಾ ಆಡಳಿತವು ಹಮ್ಮಿಕೊಂಡಿದ್ದ ಜಗಜ್ಯೋತಿ ಬಸವೇಶ್ವರರ ಜಯಂತಿ ವೇದಿಕೆ ಕಾರ್ಯಕ್ರಮದಲ್ಲಿ ಹಲವಾರು ಸಂಘ–ಸಂಸ್ಥೆಗಳ ಜೊತೆಗೆ ಅಖಿಲ ಭಾರತ ವೀರಶೈವ ಮಹಾಸಭೆಯು ಭಾಗವಹಿಸಿ ಸಮಾರಂಭವನ್ನು ಯಶಸ್ವಿಗೊಳಿಸಲಾಯಿತು. ಇದೇ ಸಂದರ್ಭದಲ್ಲಿ ಜಿಲ್ಲಾ ಕೇಂದ್ರದಲ್ಲಿ ಮಹಾಸಭೆಯ ವೀರಶೈವ–ಲಿಂಗಾಯತ ಭವನ ನಿರ್ಮಿಸಲು ಸರ್ಕಾರದಿಂದ ಮುಂದಿನ ಬಜೆಟ್‌ನಲ್ಲಿ ಹಣ ಬಿಡುಗಡೆ ಮಾಡುವಂತೆ ಮನವಿ ಮಾಡಲಾಯಿತು.
- ಜಿಲ್ಲೆಯ ಯಳಂದೂರು, ಕೊಳ್ಳೇಗಾಲ, ಗುಂಡ್ಲುಪೇಟೆ ಹಾಗೂ ಚಾಮರಾಜನಗರ ತಾಲ್ಲೂಕು ಘಟಕಗಳು ಪ್ರತ್ಯೇಕವಾಗಿ ತಾಲ್ಲೂಕು ಕೇಂದ್ರಗಳಲ್ಲಿ **ಜಗಜ್ಯೋತಿ ಬಸವೇಶ್ವರರ ಜಯಂತಿ**ಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

- ಜಿಲ್ಲಾ ಕೇಂದ್ರದಲ್ಲಿ ಬಸವ ಭವನ ನಿರ್ಮಿಸಲು ಮಾನ್ಯ ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರಿಗೆ, ಸಮಾಜದ ಗಣ್ಯವ್ಯಕ್ತಿಗಳನ್ನು, ದಾನಿಗಳನ್ನು ಸಂಪರ್ಕಿಸಿ ಹಣಕಾಸು ನೆರವು ನೀಡುವಂತೆ ಮನವಿ ಸಲ್ಲಿಸಲಾಯಿತು.
- ಚಾಮರಾಜನಗರ ತಾಲ್ಲೂಕು ಘಟಕದವತಿಯಿಂದ ಶ್ರೀ ಶಂಕರ ಬಿದರಿ ಮತ್ತು ಶ್ರೀ ಅಶೋಕಖೇಣಿ ಇವರುಗಳನ್ನು ಹಾಗೂ ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರತಿಭಾವಂತರನ್ನು ಗುರುತಿಸಿ ಸನ್ಮಾನಿಸಲಾಯಿತು.

**ಬೆಳಗಾವಿ ಜಿಲ್ಲೆ:–**

- **ಬೆಳಗಾವಿ ವೀರಶೈವ ವಾಣಿ:–**ಬೆಳಗಾವಿ ವೀರಶೈವ ವಾಣಿ ಪಾಕ್ಷಿಕ ಪತ್ರಿಕೆಯ ಪ್ರಕಟಣೆ ಒಂದು ಸಾಹಸದ ಕೆಲಸವೇ ಸರಿ. ಪ್ರಸ್ತುತ ಸಂಪಾದಕ ಮಂಡಳಿಯ ಸದಸ್ಯರು, ಸಂಪಾದಕರಾದ ಶ್ರೀ ಎಸ್.ಆರ್.ಚೋಬಾರಿ, ಪ್ರಕಾಶಕರಾದ ಶ್ರೀ ಆರ್.ಬಿ.ಪಾಟೀಲ್ ಹಾಗೂ ಶಿವಬಸವ ಮುದ್ರಣಾಲಯದ ಶ್ರೀ ನರೇಶಕುಂಟೆ, ಶ್ರೀ ಯ.ರು.ಪಾಟೀಲ, ಸಾಹಿತಿಗಳು ಇವರ ಸಹಕಾರ ಮತ್ತು ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಬಿ.ವಿ.ಕಟ್ಟಿ, ಸಂಪಾದಕರಾದ ಶ್ರೀ ಶಿವಾನಂದ ಮೂಲಿಮನಿ ಹಾಗೂ ಪ್ರಕಾಶಕರಾದ ಲಿಂ.ಜಿ.ಎಸ್.ಕಾಖಂಡಕಿಯವರು ಹಾಕಿಕೊಟ್ಟ ಮಾರ್ಗದರ್ಶನದೊಂದಿಗೆ ಶರಣ ಸಾಹಿತ್ಯಕ್ಕೆ ಮೀಸಲಾದ ಈ 'ವೀರಶೈವ ವಾಣಿ' ಪಾಕ್ಷಿಕ ಪತ್ರಿಕೆಯನ್ನು ನಿಯಮಿತವಾಗಿ ಓದುಗರಿಗೆ ತಲುಪಿಸಲಾಗುತ್ತಿದೆ.
- **ಬಸವ ಜಯಂತಿಯ ಅರ್ಥಪೂರ್ಣ ಹಾಗೂ ವೈಭವಯುತ ಆಚರಣೆ:–**ಜಿಲ್ಲೆಯ ಬಸವ ಜಯಂತಿ ಉತ್ಸವ ಸಮಿತಿಯವರುಹಾಗೂ ಬೆಳಗಾವಿ ಜಿಲ್ಲಾ ಘಟಕದವರು ದಿನಾಂಕ: 6–5–2016 ರಿಂದ 9–5–2016 ರವರೆಗೆ ನಾಲ್ಕು ದಿನಗಳ ಕಾಲ **'ಬಸವ ಜಯಂತಿ'**ಯನ್ನು ಅತ್ಯಂತ ಉತ್ಸಾಹ, ಹುರುಪು, ಹುಮ್ಮಸ್ಸಿನಿಂದ ವೈಭವ ವಿಜೃಂಭಣೆಯಿಂದ ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ಉತ್ಸವದಲ್ಲಿ ಜಿಲ್ಲೆಯ ಮಹಾಸಭೆಯ ಪದಾಧಿಕಾರಿಗಳು, ಸದಸ್ಯರುಗಳು, ಸಮಾಜದ ಗಣ್ಯವ್ಯಕ್ತಿಗಳು, ಹಿರಿಯ ಜೀವಿಗಳು ಕ್ರಿಯಾಶೀಲರಾಗಿ ಪಾಲ್ಗೊಂಡು ಯಶಸ್ವಿಗೊಳಿಸಿದರು. ವೇದಿಕೆ ಕಾರ್ಯಕ್ರಮದಲ್ಲಿ ಶ್ರೀ ಜನಾರ್ಧನ ಭೋಸಲೆ ಪಾಟೀಲ ನಾಶಿಕ ಇವರು ಉಪನ್ಯಾಸ ನೀಡಿದರು. ನಂತರ ವಚನಗಾಯನ, ಪ್ರಬಂಧ ಸ್ಪರ್ಧೆ, ಭಾಷಣ ಸ್ಪರ್ಧೆ ಏರ್ಪಡಿಸಿ ವಿಜೇತರರಿಗೆ ಬಹುಮಾನ ಹಾಗೂ ಪ್ರಶಸ್ತಿಪತ್ರಗಳನ್ನು ವಿತರಿಸಲಾಯಿತು. ಕೊನೆಯಲ್ಲಿ ಪೂಜ್ಯರು ಆಶೀರ್ವಚನ ನೀಡಿದರು. ಈ ಕಾರ್ಯಕ್ರಮದಲ್ಲಿ ಜನಪ್ರತಿನಿಧಿಗಳು, ಹಿರಿಯರು, ಸರ್ಕಾರಿ ಅಧಿಕಾರಿಗಳು, ಸಮಾಜಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.
- **ಅಮವಾಸ್ಯೆಯ ಅನುಭಾವಗೋಷ್ಠಿ:–** ಜಿಲ್ಲಾ ಘಟಕವು ಪ್ರತಿ ಅಮಾವಾಸ್ಯೆಯ ದಿನ **'ಅಮಾವಾಸ್ಯೆಯ ಅನುಭಾವ ಗೋಷ್ಠಿ'**ಯನ್ನು ಏರ್ಪಡಿಸುತ್ತಿರುವುದು ವಿಶೇಷವಾಗಿದೆ. ಅನುಭಾವ ಗೋಷ್ಠಿಗಳಲ್ಲಿ ಪ್ರಾಸಂಗಿಕವಾಗಿ ಬರುವ ಶರಣ ಶರಣೆಯರ ಜಯಂತಿ, ಸ್ಮರಣೋತ್ಸವಗಳ ಆಚರಣೆ ಹಾಗೂ ಶರಣ ಶರಣೆಯರ ಬದುಕು ಬೋಧನೆಗಳ ವಿವಿಧ, ಆಯಾಮಗಳ ಬಗ್ಗೆ ಪರಿಣಿತರಿಂದ ಉಪನ್ಯಾಸ, ನಂತರ ಸಭಿಕರಿಂದ ಮುಕ್ತ ಚರ್ಚೆ ಏರ್ಪಡಿಸಲಾಗುತ್ತದೆ. ಈ ಅನುಭಾವ ಗೋಷ್ಠಿಗಳಲ್ಲಿ ವೀರಶೈವ–ಲಿಂಗಾಯತ ಧರ್ಮಾಚರಣೆ, ಬಸವ ತತ್ವಗಳು, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಆರೋಗ್ಯ, ಲಿಂಗ ಸಮಾನತೆ, ವಿಜ್ಞಾನ, ಆರ್ಥಿಕ, ಕಾಯಕ, ಜಾತ್ಯಾತೀತ ಸಮಾಜದ ಪರಿಕಲ್ಪನೆ ಕುರಿತಂತೆ ಹನ್ನೆರಡನೇ ಶತಮಾನದ ಶರಣರ ವಿಚಾರಸರಣಿ, ಸಂದೇಶಗಳ ಕುರಿತು ಈ ಅವಧಿಯಲ್ಲಿ ಒಟ್ಟು 12 ಉಪನ್ಯಾಸಗಳು ಜರುಗಿರುತ್ತವೆ.
- **ಕೈದಿಗಳ ಮನ ಪರಿವರ್ತನೆ :–**ದಿನಾಂಕ: 7–5–2016ರಂದು ಜಿಲ್ಲಾ ಘಟಕದಿಂದ ಕೇಂದ್ರ ಕಾರಾಗೃಹ ಹಿಂಡಲಗಾ, ಬೆಳಗಾವಿಯಲ್ಲಿ ಕೈದಿಗಳ ಮನಪರಿವರ್ತನಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕೈದಿಗಳು ವಚನಗಾಯನ,

ಭಜನೆಯನ್ನು ಅತೀ ಸುಂದರವಾಗಿ ಮಾಡಿದರು. ಕೈದಿಗಳನ್ನುದ್ದೇಶಿಸಿ ಮಾತನಾಡಿದ ಶ್ರೀ ಟಿ.ಪಿ.ಶೇಷ ಮತ್ತು ಸಹಾಯಕ ಅಧೀಕ್ಷಕರಾದ ಶ್ರೀ ಮೂಲಿಮನಿಯವರು ಬಸವ ಸಂದೇಶ, ವಚನಗಳ ಸಂದೇಶವನ್ನು ಪಾಲಿಸಿ, ಸನ್ನಡತೆಯಿಂದ ಕೈದಿಗಳು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಿದೆ ಎಂದರು. ಅಧ್ಯಕ್ಷೀಯ ನುಡಿಗಳನ್ನಾಡಿದ ಶ್ರೀ ಸಿದ್ಧನಗೌಡ ಪಾಟೀಲರು ಯಾವುದೋ ಒಂದು ಕೆಟ್ಟ ಗಳಿಗೆಯಲ್ಲಿ ಕೋಪ, ದ್ವೇಷ, ಸೇಡಿನ ಭಾವನೆಗಳಿಗೊಳಗಾಗಿ ತಪ್ಪುಮಾಡಿ ಜೈಲು ಸೇರಿದ್ದರೂ ಈ ಜೈಲು ವಾಸದಲ್ಲಿ ಪ್ರತಿಯೊಬ್ಬರೂ ತಪ್ಪಿಗೆ ಪ್ರಾಯಶ್ಚಿತ ಪಟ್ಟು ಸನ್ನಡತೆಯಿಂದ ಸಜ್ಜನರಾಗಲು ಸಾಧ್ಯವಿದೆ. ಆದ್ದರಿಂದ ತಾವೆಲ್ಲ ಸೌಜನ್ಯದಿಂದ, ಪ್ರೀತಿ, ಪ್ರೇಮದಿಂದ ವರ್ತಿಸಿ ವಚನಗಳಲ್ಲಡಕವಾದ ಸಂದೇಶಗಳನ್ನು ಪಾಲಿಸಿದರೆ ಪ್ರತಿಯೊಬ್ಬರೂ ಬುದ್ಧ, ಬಸವ, ಅಂಬೇಡ್ಕರಾಗಲು ಸಾಧ್ಯವಿದೆಯೆಂದು ವಾಲ್ಮೀಕಿ ಹಾಗೂ ಮುಂತಾದವರ ಉದಾಹರಣೆಗಳನ್ನು ನೀಡಿ ಕೈದಿಗಳಿಗೆ ಶುಭಹಾರೈಸಿದರು. ಈ ಸಂದರ್ಭದಲ್ಲಿ ಕೈದಿಗಳೆಲ್ಲಾ ಮಂದಸ್ಮಿತರಾಗಿದ್ದರು. ಕೆಲವು ಕೈದಿಗಳು ವಚನಗಳನ್ನು ತಾಳಬದ್ಧವಾಗಿ ಹಾಡಿದರು. ಕೊನೆಯಲ್ಲಿ ಕೈದಿಗಳಿಗೆ ಬಸವದರ್ಶನ ಪುಸ್ತಕ ಮತ್ತು ಹಣ್ಣುಹಂಪಲು ವಿತರಿಸಲಾಯಿತು.

- ದಿನಾಂಕ: 7–5–2016ರಂದು ಜಿಲ್ಲಾ ಘಟಕದ ಮಹಿಳಾ ವಿಭಾಗದಿಂದ **"ಮಹಿಳಾ ಗೋಷ್ಠಿ"**ಯನ್ನು ಆಯೋಜಿಸಲಾಗಿತ್ತು. ಅಧ್ಯಕ್ಷತೆಯನ್ನು ಶ್ರೀಮತಿ ಮೃಣಾಲಿನಿ ಅಂಗಡಿಯವರು ವಹಿಸಿದ್ದರು. ವಿಶೇಷ ಉಪನ್ಯಾಸಕರಾಗಿ ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ ಇವರು ಆಗಮಿಸಿ ಬಸವಣ್ಣನವರ ಕುರಿತು ವಚನ ಸಾಹಿತ್ಯದ ಕುರಿತು ಉಪನ್ಯಾಸ ನೀಡಿದರು. ಗೋಷ್ಠಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿ ಯಶಸ್ವಿಗೊಳಿಸಿದರು.

- **ಹಿರಿಯ ನಾಗರೀಕರೊಂದಿಗೆ ಸಂವಾದ:–** ಶ್ರೀ ಮ.ನಿ.ಪ್ರ. ಡಾ.ಸಿದ್ಧರಾಮ ಮಹಾಸ್ವಾಮಿಗಳು, ರುದ್ರಾಕ್ಷಿಮಠ, ನಾಗನೂರು ಬೆಳಗಾವಿ ಇವರ ಆಶ್ರಯದಲ್ಲಿ ದೇವರಾಜ ಅರಸ ಬಡಾವಣೆ ಬಸವನ ಕುಡಚಿಯಲ್ಲಿರುವ ವೃದ್ಧಾಶ್ರಮ ಕೇಂದ್ರಕ್ಕೆ ಭೇಟಿಕೊಟ್ಟು ಹಿರಿಯ ನಾಗರೀಕರಿಗೆ ದಿನನಿತ್ಯ ಬೇಕಾಗುವ ಅವಶ್ಯಕ ವಸ್ತುಗಳನ್ನು ಹಾಗೂ ಹಣ್ಣು ಹಂಪಲುಗಳನ್ನು ವಿತರಿಸುವ ಕಾರ್ಯಕ್ರಮವನ್ನು ದಿನಾಂಕ: 8–5–2016ರಂದು ಹಮ್ಮಿಕೊಳ್ಳಲಾಗಿತ್ತು. ವೃದ್ಧಾಶ್ರಮದ ವ್ಯವಸ್ಥಾಪಕರಾದ ಶ್ರೀ ಚೌಗಲೆಯವರು ಪ್ರಾಸ್ತಾವಿಕವಾಗಿ ಮಾತಾಡಿ ಕಳೆದ ಹಲವು ವರ್ಷಗಳಿಂದ ವೃದ್ಧಾಶ್ರಮದಲ್ಲಿರುವ ನಿವಾಸಿಗಳನ್ನು ಅತ್ಯಂತ ಪ್ರೀತಿಯಿಂದ ಕಾಣಲಾಗುತ್ತಿದೆ. ಅವರ ಕಷ್ಟ, ಸಮಸ್ಯೆಗಳಿಗೆ, ಆರೋಗ್ಯ ರಕ್ಷಣೆಗೆ ನಿರಂತರ ಶ್ರಮಿಸಲಾಗುತ್ತಿದೆ ಎಂದು ಹೇಳಿದರು. ನಂತರ ಬಸವಣ್ಣನವರ ಭಾವಚಿತ್ರಕ್ಕೆ ಹಿರಿಯನಾಗರೀಕರಿಂದ ಪೂಜೆ ಸಲ್ಲಿಸಲಾಯಿತು. ಶ್ರೀ ಸಿದ್ಧನಗೌಡ ಪಾಟೀಲ ವೃದ್ಧರನುದ್ದೇಶಿಸಿ ಶ್ರೀಗಳ ನಿರಂತರ ಮಾತೃಹೃದಯದ ಪ್ರೀತಿ, ಪ್ರೇಮ, ಬೇಕು ಬೇಡಿಕೆಗಳನ್ನು ಒದಗಿಸುತ್ತಿರುವುದರಿಂದ ಮತ್ತು ಸಮಾಜದ ನಾವೆಲ್ಲರೂ ನಿಮ್ಮೊಂದಿಗಿದ್ದು ಬೇಕಾಗುವ ಸಹಾಯ, ಸಹಕಾರ ಒದಗಿಸಲು ಸಮರ್ಥರಿರುವುದರಿಂದ ಅನಾಥಪ್ರಜ್ಞೆಯಿಂದ ಬಳಲುವುದು ಬೇಡವೆಂದರು. ಎಲ್ಲರ ಉಪದೇಶಗಳನ್ನು ಆಲಿಸಿದ ವೃದ್ಧರ ಮುಖಗಳಲ್ಲಿ ಸಂತೋಷ, ಸಡಗರ ವಿಜೃಂಭಿಸುತ್ತಿತ್ತು. ಸಂಜೆ ವಿವಿಧ ಸಂಘ–ಸಂಸ್ಥೆಗಳಿಂದ ರೂಪಕ, ವಚನಗಾಯನ, ವಚನನೃತ್ಯ, ವಚನಸಂಗೀತ ಹೀಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.ದಿನಾಂಕ: 9–5–2016ರಂದು ಬಸವಣ್ಣನವರ ಭಾವಚಿತ್ರವನ್ನು ರಥದಲ್ಲಿ ಇರಿಸಿ, ಭವ್ಯ ಮೆರವಣಿಗೆಯು ಪೂಜ್ಯರುಗಳ ಸಾನ್ನಿಧ್ಯದಲ್ಲಿ, ಸರ್ಕಾರಿ ಅಧಿಕಾರಿಗಳು, ರಾಜಕಾರಣಿಗಳು, ಸಮಾಜದ ಗಣ್ಯವ್ಯಕ್ತಿಗಳ ಉಪಸ್ಥಿತಿಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ನಗರದ ಪ್ರಮುಖ ಬೀದಿಗಳಲ್ಲಿ ನಡೆಯಿತು.

- **ವೀರಶೈವ–ಲಿಂಗಾಯತ ವಧು–ವರರ ಅನ್ವೇಷಣಾ ಕೇಂದ್ರ:**–ಜಿಲ್ಲಾ ಘಟಕವು ಕೆ.ಎಲ್.ಇ ಸಂಸ್ಥೆಯ ಸಹಯೋಗದೊಂದಿಗೆ 1992ರಲ್ಲಿ ಪ್ರಾರಂಭವಾದ ವೀರಶೈವ–ಲಿಂಗಾಯತ ವಧು–ವರರ ಅನ್ವೇಷಣಾ ಕೇಂದ್ರವು ವಧು–ವರರ ಪಾಲಕರ ಸಮ್ಮೇಳನವು ದಿನಾಂಕ: 29–01–2017ರಂದು ನೆರವೇರಿತು. ಸಮಾಜದ ಅನೇಕ ವಧು–ವರರು, ವಿಧವೆಯರು,

ವಿಧುರರು, ವಿಚ್ಛೇದಿತರು ಇದರ ಉಪಯೋಗವನ್ನು ಪಡೆದುಕೊಂಡರು. ಈ ಅವಧಿಯಲ್ಲಿ ಸುಮಾರು ಜನರು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿದ್ದಾರೆ.

- **ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಪರಿಣತಿ ಪಡೆದ/ ಸಮಾಜಕ್ಕೆ ಅನುಪಮ ಸೇವೆ ಸಲ್ಲಿಸಿದ ಗಣ್ಯಮಾನ್ಯರಿಗೆ ಈ ವರ್ಷಾವಧಿಯಲ್ಲಿ ಸತ್ಕಾರ:–** ಮಹಾಸಭೆಯ ಬೆಳಗಾವಿ ಜಿಲ್ಲಾ ಘಟಕವು ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಪರಿಣಿತಿ ಪಡೆದ ಹಾಗೂ ಸಮಾಜಕ್ಕೆ ಅನುಪಮ ಸೇವೆ ಸಲ್ಲಿಸಿದ ಗಣ್ಯಮಾನ್ಯರನ್ನು ಸನ್ಮಾನಿಸುವ ಯೋಜನೆ ಹಾಕಿಕೊಳ್ಳಲಾಗಿತ್ತು. ಶ್ರೀಮತಿ ನೀಲಗಂಗಾ ಚರಂತಿಮಠ ಇವರಿಗೆ ರಾಮದುರ್ಗದಲ್ಲಿ ಜರುಗಿದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಗೊಂಡಿದ್ದಕ್ಕೆ ಜಿಲ್ಲಾ ಘಟಕ ಹಾಗೂ ಮಹಿಳಾ ವಿಭಾಗದ ವತಿಯಿಂದ ಸತ್ಕರಿಸಲಾಯಿತು. ಇದಲ್ಲದೇ ಸಿರಿಗನ್ನಡ ರಾಷ್ಟ್ರೀಯ ಪ್ರತಿಷ್ಠಾನದ ವತಿಯಿಂದ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಶ್ರೀಮತಿ ಶೈಲಜಾ ಭಿಂಗೆ ಹಾಗೂ ಶ್ರೀಮತಿ ರತ್ನಪ್ರಭಾ ಬೆಲ್ಲದ ಇವರಿರ್ವರಿಗೂ ಜಿಲ್ಲಾ ಘಟಕದ ವತಿಯಿಂದ ಸತ್ಕರಿಸಲಾಯಿತು.

- **ಪ್ರತಿಭಾ ಪುರಸ್ಕಾರ:–** ಪ್ರತಿ ವರ್ಷದಂತೆ 2015–16ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಶೇಕಡ 90 ಹಾಗೂ 90ಕ್ಕಿಂತ ಹೆಚ್ಚು ಅಂಕ ಗಳಿಸಿದ 198 ವಿದ್ಯಾರ್ಥಿಗಳಿಗೆ ಮಹಾಸಭೆಯಿಂದ ಕೊಟ್ಟಂತಹ ಕರಡಿಗೆ, ಚೆಕ್ ಹಾಗೂ ಪ್ರಶಂಸಾ ಪತ್ರ ನೀಡಿ ಗೌರವಿಸಲಾಯಿತು. ಅಂತೆಯೇ ಬೆಳಗಾವಿ ಜಿಲ್ಲಾ ಘಟಕದ ದತ್ತಿನಿಧಿ ಠೇವಣಿ ಮೊತ್ತದಿಂದ ಬಂದಿರುವ ಬಡ್ಡಿ ಹಣದಿಂದ ಎಸ್.ಎಸ್.ಎಲ್.ಸಿ ಯಿಂದ ಎಂ.ಬಿ.ಬಿ.ಎಸ್., ಇಂಜಿನಿಯರಿಂಗ್ ಹಾಗೂ ಬಿ.ಬಿ.ಎಂ. ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಸುಮಾರು 50 ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ನಗದು ಬಹುಮಾನ ಹಾಗೂ ಪ್ರಶಸ್ತಿಪತ್ರದೊಂದಿಗೆ **'ಪ್ರತಿಭಾ ಪುರಸ್ಕಾರ'**ವನ್ನು ನೀಡಿ ಪ್ರೋತ್ಸಾಹವನ್ನು ನೀಡಲಾಗಿದೆ. ಸಮಾರಂಭದಲ್ಲಿ ಮಹಾಸಭೆಯ ಉಪಾಧ್ಯಕ್ಷರಾದ ಶ್ರೀ ಗುರುರಾಜ ಹುಣಸೀಮರದ ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

- **ಸಂಸ್ಥಾಪಕ ಅಧ್ಯಕ್ಷರ 126ನೇ ಜಯಂತೋತ್ಸವ ಆಚರಣೆ:–**ಶ್ರೀ ಮ.ನಿ.ಪ್ರ.ಪರಮಪೂಜ್ಯ ಡಾ.ಸಿದ್ಧರಾಮ ಮಹಾಸ್ವಾಮಿಗಳು, ರುದ್ರಾಕ್ಷಿಮಠ–ನಾಗನೂರ, ಬೆಳಗಾವಿ ಇವರು, ಜಿಲ್ಲಾ ಘಟಕದ ಸಂಸ್ಥಾಪಕ ಅಧ್ಯಕ್ಷರಾದ ಮಹಾಪ್ರಸಾದಿ, ಕಾಯಕಯೋಗಿ ಲಿಂ.ಡಾ.ಶಿವಬಸವ ಮಹಾಸ್ವಾಮಿಗಳ 126ನೇ ಜಯಂತಿಯನ್ನು ತಮ್ಮ ಮಠದಲ್ಲಿ ದಿನಾಂಕ 6, 7, ಮತ್ತು 8 ಡಿಸೆಂಬರ್ 2016ರಂದು ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ಸಮಾರಂಭದಲ್ಲಿ ಜಿಲ್ಲಾ ಘಟಕವು ಸಕ್ರಿಯವಾಗಿ ಭಾಗಿಯಾಗಿರುತ್ತದೆ.

- ದಿನಾಂಕ: 7–6–2016ರಂದು ಪರಮಪೂಜ್ಯ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜನ್ಮಶತಮಾನೋತ್ಸವದ ಜ್ಯೋತಿಯಾತ್ರೆಯು ರಾಣಿ ಚನ್ನಮ್ಮ ವೃತ್ತಕ್ಕೆ ಆಗಮಿಸಿ ಜ್ಯೊತಿರಥವನ್ನು ಎಲ್ಲ ಬಸವಾಭಿಮಾನಿಗಳು ಸ್ವಾಗತಿಸಿದರು. ನಗರದ ಗಣ್ಯಮಾನ್ಯರು ಹಾಗೂ ಬಸವಾಭಿಮಾನಿಗಳು ಸಾಕಷ್ಟು ಸಂಖ್ಯೆಯಲ್ಲಿ ಅತೀ ಸಂತಸದಿಂದ ಮೆರವಣಿಗೆಯಲ್ಲಿ ಭಾಗವಹಿಸಿ ನಗರದ ವಿವಿಧ ಮುಖ್ಯರಸ್ತೆಗಳಲ್ಲಿ ಸಂಚರಿಸಿ ಶ್ರೀ ಜಗಜ್ಯೋತಿ ಬಸವೇಶ್ವರ ಕಲ್ಯಾಣ ಮಂಟಪ ಶಹಾಪೂರದವರೆಗೆ ತಲುಪಿ ಮಹಾಪ್ರಸಾದದೊಂದಿಗೆ ಸಮಾರೋಪಗೊಂಡಿತು.

- ಜಿಲ್ಲಾ ಘಟಕದವತಿಯಿಂದ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಭೇಟಿನೀಡಿ ಸದಸ್ಯತ್ವ, ಸಂಘಟನೆ, ಹಾಸ್ಟೆಲ್, ಭವನ ನಿರ್ಮಿಸಲು ಮಹಾಸಭೆಯ ಗುರಿ ಮತ್ತು ಧ್ಯೇಯೋದ್ದೇಶಗಳ ಬಗ್ಗೆ ಅರಿವು ಮೂಡಿಸಲಾಯಿತು.

**ರಾಮನಗರ ಜಿಲ್ಲೆ:–**

- ಚನ್ನಪಟ್ಟಣ ತಾಲ್ಲೂಕ ಘಟಕದ ವತಿಯಿಂದ ದಿನಾಂಕ 1–4–2016ರಂದು ತ್ರಿವಿಧದಾಸೋಹಿ ಡಾ.ಶ್ರೀಶ್ರೀ ಶಿವಕುಮಾರ ಮಹಾಸ್ವಾಮಿಜಿಯವರ ಜನಮದಿನವನ್ನು ಕೆ.ಎಸ್.ಆರ್.ಟಿ.ಸಿ. ಬಸ್‌ನಿಲ್ದಾಣದಲ್ಲಿ ಶ್ರೀಗಳ ಭಾವಚಿತ್ರವಿಟ್ಟು ಮಾಲಾರ್ಪಣೆ ಮಾಡಿ ವಿಜೃಂಭಣೆಯಿಂದ ಆಚರಿಸಲಾಯಿತು. ಆಗಮಿಸಿದ್ದ ಎಲ್ಲಾ ಭಕ್ತರಿಗೆ ಮಜ್ಜಿಗೆ, ಪಾನಕ ಮತ್ತು ಕೋಸಂಬರಿ ವಿತರಿಸಲಾಯಿತು.

- ಚನ್ನಪಟ್ಟಣ ತಾಲ್ಲೂಕ ಘಟಕದ ವತಿಯಿಂದ ಹಾಗೂ ರಾಷ್ಟ್ರೀಯ ಹಬ್ಬಗಳ ಹಿತರಕ್ಷಣಾ ಸಮಿತಿ ಸಂಯುಕ್ತ ಆಶ್ರಯದಲ್ಲಿ 9–5–2016ರಂದು ಜಗಜ್ಯೋತಿ ಬಸವೇಶ್ವರ ಜಯಂತಿಯನ್ನು ತಾಲ್ಲೂಕು ಕಛೇರಿ ಆವರಣದಲ್ಲಿ ದಂಡಾಧಿಕಾರಿಗಳಾದ ಶ್ರೀ ಪಿ.ರಮೇಶ್ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನ ಹಾಗೂ ಇತರೇ ಇಲಾಖೆಯ ಅಧಿಕಾರಿಗಳು ಮತ್ತು ಸಮಾಜದ ಮುಖಂಡರುಗಳು ಸೇರಿ ಅದ್ದೂರಿಯಾಗಿ ಆಚರಿಸಲಾಯಿತು.

- ದಿನಾಂಕ: 6–5–2016ರಂದು 6ನೇ ಮನೆಯಂಗಳದಲ್ಲಿ **'ಅರಿವಿನ ಹಬ್ಬ'** ಎಂಬ ವಿನೂತನ ಕಾರ್ಯಕ್ರಮವನ್ನು ಚನ್ನಪಟ್ಟಣ ತಾಲ್ಲೂಕು ಘಟಕದ ಅಧ್ಯಕ್ಷರಾದ ಶ್ರೀ ಪಿ.ಗುರುಮಾದಯ್ಯನವರ ಸ್ವಗೃಹದಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ರಾಜ್ಯಮಟ್ಟದ ಅತಿಥಿಗಳನ್ನು ಕರೆಸಲಾಗಿತ್ತು. ಎಸ್.ಎಸ್.ಎಲ್.ಸಿ. ಪರೀಕ್ಷಾಮಂಡಳಿಯ ನಿರ್ದೇಶಕರಾದ ಶ್ರೀಮತಿ ವಿ.ಸುಮಂಗಲರವರು ಮುಖ್ಯಅತಿಥಿಗಳಾಗಿ ಭಾಗವಹಿಸಿದ್ದರು.ಕಾರ್ಯಕ್ರಮದಲ್ಲಿ ಸುಮಾರು 25 ಮಂದಿ ಎಲ್ಲಾ ಜನಾಂಗದವರನ್ನು ಗುರುತಿಸಿ ಅವರ ಸೇವೆಯನ್ನು ಪರಿಗಣಿಸಿ ಶ್ರೀ ಎನ್.ತಿಪ್ಪಣ್ಣನವರಿಂದ ಅಭಿನಂದಿಸಲಾಯಿತು.

- ದಿನಾಂಕ: 28–5–2016ರಂದು ಶ್ರೀ ಸಿದ್ಧಗಂಗಾಶ್ರೀಗಳ 109ನೇ ಜನ್ಮದಿನಾಚರಣೆ ಹಾಗೂ 883ನೇ ಬಸವ ಜಯಂತಿಯನ್ನು ಶ್ರೀ ಕೊಲ್ಲಾಪುರದಮ್ಮ ದೇವಸ್ಥಾನ, ಬಯಲು ರಂಗಮಂದಿರದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು.

- ರಾಮನಗರ ಜಿಲ್ಲಾ ಘಟಕದ ವತಿಯಿಂದ **'ಪ್ರತಿಭಾ ಪುರಸ್ಕಾರ'**ವನ್ನು ದಿನಾಂಕ: 9–7–2016ರಂದು ಜಿಲ್ಲೆಯ ಅರ್ಚಕರಹಳ್ಳಿಯಲ್ಲಿಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಮಹಾಸಭೆಯ ಉಪಾಧ್ಯಕ್ಷರಾದ ಶ್ರೀ ಬಿ.ಎಸ್.ಸಚ್ಚಿದಾನಂದ ಮೂರ್ತಿಯವರು ಉದ್ಘಾಟಿಸಿದರು. ರಾಜ್ಯ ಮಹಿಳಾ ಅಧ್ಯಕ್ಷರಾದ ಶ್ರೀಮತಿ ಮಂಜುಳಾ ಕಿರಣ್ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಶೇಕಡ 90ಕ್ಕಿಂತ ಹೆಚ್ಚು ಅಂಕಗಳಿಸಿದ ಜಿಲ್ಲೆಯ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ.ಯ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರಿವಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

- ದಿನಾಂಕ: 18–7–2016ರಂದು ಚನ್ನಪಟ್ಟಣ ನಗರಕ್ಕೆ ಆಗಮಿಸಿದ ಶ್ರೀ ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಪರಮಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜನ್ಮಶತಮಾನೋತ್ಸವ ಜ್ಯೋತಿಯಾತ್ರೆಯನ್ನು ವಿವಿಧ ಜಾನಪದ ಕಲಾತಂಡಗಳೊಂದಿಗೆ ಸ್ವಾಗತಿಸಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ರಾಮನಗರಕ್ಕೆ ಬೀಳ್ಕೊಡಲಾಯಿತು. ತಾಲ್ಲೂಕು ಘಟಕದ ಅಧ್ಯಕ್ಷರಾದ ಶ್ರೀ ಪಿ.ಗುರುಮಾದಯ್ಯನವರ ನೇತೃತ್ವದಲ್ಲಿ ಜರುಗಿದ ಈ ಕಾರ್ಯಕ್ರಮಕ್ಕೆ ಸಾಕಷ್ಟು ಜನ ಸಮಾಜಬಾಂಧವರು ಪಾಲ್ಗೊಂಡು ಯಶಸ್ವಿಗೊಳಿಸಿದರು.

- ದಿನಾಂಕ: 19–7–2016ರಂದು ಗುರುಪೂರ್ಣಿಮೆ ಪ್ರಯುಕ್ತ ಶ್ರೀ ಶಿವರುದ್ರಮಹಾಸ್ವಾಮಿಗಳು, ವಿರಕ್ತಮಠ, ಚನ್ನಪಟ್ಟಣ, ಶ್ರೀ ಮೃತ್ಯುಂಜಯ ಶಿವಾಚಾರ್ಯಸ್ವಾಮಿಗಳು, ಬೇವೂರುಮಠ, ಶ್ರೀ ಹರೀಶ್ ಮಹಾಸ್ವಾಮಿಗಳ ಪಾದಪೂಜೆಯೊಂದಿಗೆ ಪಟ್ಟಣದ ಚಂದ್ರಸಾಗರ್ ಕಾಂಪ್ಲೆಕ್ಸ್‌ನಲ್ಲಿ ಸಮಾರಂಭವನ್ನು ಏರ್ಪಡಿಸಲಾಗಿತ್ತು.ಶ್ರೀ ಪಿ.ಗುರುಮಾದಯ್ಯನವರು ಮಾತನಾಡುತ್ತಾ ಈ ರೀತಿ ಗುರುಪೂರ್ಣಿಮ ಕಾರ್ಯಕ್ರಮ ಮಾಡುವುದರಿಂದ ನಮ್ಮ ಸಂಸ್ಕೃತಿ, ಆಚಾರ, ವಿಚಾರ, ನಡೆ, ನುಡಿ, ಗುರುಭಕ್ತಿ ಯುವಪೀಳಿಗೆಗೆ ಮಾರ್ಗದರ್ಶನವಾಗುತ್ತದೆ ಎಂದು ತಿಳಿಸಿದರು.

- ದಿನಾಂಕ: 25-12-2016ರಂದು ಶ್ರೀ ಮಲ್ಲಿಕಾರ್ಜುನಮಠ ಬೇವೂರಿನಲ್ಲಿ ಶ್ರೀ ಸಿದ್ಧಗಂಗಾ ಶ್ರೀಗಳು ಮತ್ತು ಇನ್ನು ಹಲವಾರು ಹರ-ಗುರುಚರಮೂರ್ತಿಗಳ ದಿವ್ಯಸಾನ್ನಿಧ್ಯದಲ್ಲಿ 2017ರ ನೂತನ ದಿನದರ್ಶಿಕೆ(ಕ್ಯಾಲೆಂಡರ್)ಯನ್ನು ಬಿಡುಗಡೆ ಮಾಡಿಸಲಾಯಿತು. 2017ರ ಕ್ಯಾಲೆಂಡರ್ ವರ್ಣರಂಜಿತವಾಗಿದ್ದು ರೈತರ, ವ್ಯಾಪಾರಸ್ಥರ, ಗೃಹಿಣಿಯರ, ಸರ್ಕಾರಿ ನೌಕರರ, ಸಮಾಜದ ಎಲ್ಲಾ ಶುಭ ಸಮಾರಂಭಗಳನ್ನು ತಿಳಿಸುವಂತೆ ಮುದ್ರಿಸಿರುತ್ತಾರೆ. ಶ್ರೀಗಳು ತಾಲ್ಲೂಕು ಘಟಕದ ಸೇವಾಕಾರ್ಯವನ್ನು ಮುಕ್ತಕಂಠದಿಂದ ಹೊಗಳಿದರು.
- ದಿನಾಂಕ: 25-12-2016ರಂದು ಬೊಂಬೆನಗರಿ ಚನ್ನಪಟ್ಟಣಕ್ಕೆ ಮಂಡ್ಯ ಜಿಲ್ಲೆಯಿಂದ ಆಗಮಿಸಿದ ಶ್ರೀ ಸಿದ್ಧಗಂಗಾಶ್ರೀಗಳ 110ನೇ ವರ್ಷ ಶೋಭಾಯಾತ್ರೆಯನ್ನು ತಾಲ್ಲೂಕಿನ ಗಡಿಭಾಗದಲ್ಲಿ ಸ್ವಾಗತಿಸಿ, ಪುರಭವನದ ಹತ್ತಿರ ಸಮಾರಂಭ ಏರ್ಪಡಿಸಿ, ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ, ರಾಮನಗರಕ್ಕೆ ಕಳಿಸಿಕೊಡಲಾಯಿತು.

**ಬೀದರ್ ಜಿಲ್ಲೆ:-**

- **'ಬಸವ ಜಯಂತಿ'ಯನ್ನು** ಜಿಲ್ಲಾ ಘಟಕ ಮತ್ತು ಜಿಲ್ಲಾಡಳಿತದ ಸಹಯೋಗದೊಂದಿಗೆ ಬಸವೇಶ್ವರರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು.
- ಬೀದರ್ ಜಿಲ್ಲಾ ಘಟಕದ ವತಿಯಿಂದ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ.ಯಲ್ಲಿ ಶೇಕಡಾ 90 ಹಾಗೂ ಅದಕ್ಕಿಂತ ಹೆಚ್ಚು ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ **'ಪ್ರತಿಭಾ ಪುರಸ್ಕಾರ'**ವನ್ನು ಏರ್ಪಡಿಸಲಾಗಿತ್ತು. ಸಮಾರಂಭದಲ್ಲಿ ಮಹಾಸಭೆಯ ನಿಕಟಪೂರ್ವ ಅಧ್ಯಕ್ಷರಾದ ಡಾ.ಭೀಮಣ್ಣ ಖಂಡ್ರೆಯವರು, ಸಚಿವರು ಹಾಗೂ ಮಹಾಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಈಶ್ವರ ಖಂಡ್ರೆಯವರು ಹಾಗೂ ಇನ್ನಿತರೇ ಪದಾಧಿಕಾರಿಗಳು ಭಾಗವಹಿಸಿದ್ದರು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕರಡಿಗೆ, ಚೆಕ್ ಹಾಗೂ ಪ್ರಶಂಸಾ ಪತ್ರಗಳನ್ನು ನೀಡಿ ಪ್ರೋತ್ಸಾಯಿಸಲಾಯಿತು.

**ದಾವಣಗೆರೆ ಜಿಲ್ಲೆ:-**

- 2015-16ನೇ ಸಾಲಿನ ಎಸ್.ಎಸ್.ಎಲ್.ಸಿ.ಮತ್ತು ದ್ವಿತೀಯ ಪಿ.ಯು.ಸಿ.ಯಲ್ಲಿ ಶೇಕಡಾ 90 ಹಾಗೂ ಅದಕ್ಕಿಂತ ಹೆಚ್ಚು ಅಂಕ ಪಡೆದ ಜಿಲ್ಲೆಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ **'ಪ್ರತಿಭಾ ಪುರಸ್ಕಾರ'**ವನ್ನು ಏರ್ಪಡಿಸಲಾಗಿತ್ತು. ಸಮಾರಂಭವನ್ನು ಮಹಾಸಭೆಯ ಅಧ್ಯಕ್ಷರಾದ ಡಾ ಶಾಮನೂರು ಶಿವಶಂಕರಪ್ಪನವರು ಉದ್ಘಾಟಿಸಿದರು. ಮಹಾಸಭೆಯ ಉಪಾಧ್ಯಕ್ಷರಾದ ಶ್ರೀ ಎ.ಸಿ.ಜಯಣ್ಣನವರು, ಶ್ರೀ ಎ.ಎಸ್.ವೀರಣ್ಣನವರು, ಶ್ರೀ ಎಸ್.ಎಸ್.ಗಣೇಶ್‌ರವರು ಹಾಗೂ ಇನ್ನಿತರೇ ಮಹಾಸಭಾ ಪದಾಧಿಕಾರಿಗಳು ಉಪಸ್ಥಿತರಿದ್ದರು. ಮಹಾಸಭೆಯ ಕೇಂದ್ರ ಕಛೇರಿಯಿಂದ ಕೊಟ್ಟಂತಹ ಕರಡಿಗೆ, ಚೆಕ್ ಹಗೂ ಪ್ರಶಂಸಾ ಪತ್ರಗಳನ್ನು ನೀಡಿ ಗೌರವಿಸಲಾಯಿತು.
- ಜಿಲ್ಲಾ ಘಟಕದ ವತಿಯಿಂದ **'ಬಸವ ಜಯಂತಿ'** ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲಾಯಿತು.
- ಜಿಲ್ಲಾ ಮಹಿಳಾ ವಿಭಾಗದ ವತಿಯಿಂದ **'ವಿಶ್ವ ಮಹಿಳಾ ದಿನಾಚರಣೆ'** ಕಾರ್ಯಕ್ರಮವನ್ನು ಬಹಳ ಅದ್ದೂರಿಯಾಗಿ ಹಮ್ಮಿಕೊಳ್ಳಲಾಗಿತ್ತು.

**ತುಮಕೂರು ಜಿಲ್ಲೆ:-**

- ಜಿಲ್ಲಾಡಳಿತದ ಸಹಯೋಗದೊಂದಿಗೆ **'ಬಸವ ಜಯಂತಿ'**ಯನ್ನು ಸಂಭ್ರಮ ಸಡಗರಗಳೊಂದಿಗೆ ಆಚರಿಸಲಾಯಿತು.

- ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಅತಿಹೆಚ್ಚು ಅಂಕಗಳಿಸಿದ ಜಿಲ್ಲೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ **"ಪ್ರತಿಭಾ ಪುರಸ್ಕಾರ"** ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

**ಶಿವಮೊಗ್ಗ ಜಿಲ್ಲೆ:–**

- ಶಿವಮೊಗ್ಗ ಜಿಲ್ಲಾ ಘಟಕದ ವತಿಯಿಂದ **'ಬಸವ ಜಯಂತಿ'** ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಹೆಚ್ಚು ಬಸವಾಭಿಮಾನಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

- ಶಿವಮೊಗ್ಗ ಜಿಲ್ಲಾ ಘಟಕದ ವತಿಯಿಂದ ದಿನಾಂಕ: 14–8–2016ರಂದು ಕುವೆಂಪು ರಂಗಮಂದಿರ, ಶಿವಮೊಗ್ಗ ಇಲ್ಲಿ ಲಂಡನ್‌ನಲ್ಲಿ ವಿಶ್ವಗುರು ಬಸವಣ್ಣನವರ ಪುತ್ಥಳಿ ಸ್ಥಾಪಿಸಿದ **ಶರಣ ಡಾ. ನೀರಜ್ ಪಾಟೀಲ್**ರವರಿಗೆ **ಕೆಳದಿ ಶಿವಪ್ಪನಾಯಕ ಪ್ರಶಸ್ತಿ ಪ್ರಧಾನ ಸಮಾರಂಭ** ಹಾಗೂ ಅಭಿನಂದನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಮಾಜಿ ಮುಖ್ಯಮಂತ್ರಿಗಳು ಹಾಗೂ ಸಂಸದರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಸಮಾರಂಭವನ್ನು ಉದ್ಘಾಟಿಸಿದರು. ಸಮಾರಂಭದಲ್ಲಿ ಸ್ಥಳೀಯ ಜನಪ್ರತಿನಿಧಿಗಳು, ಮಹಾಸಭೆಯ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

- ದಿನಾಂಕ: 27–11–2016ರಂದು ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ವಿದ್ಯಾರ್ಥಿಗಳಿಗೆ **'ಪ್ರತಿಭಾ ಪುರಸ್ಕಾರ'** ಹಾಗೂ **"ಸನ್ಮಾನ ಸಮಾರಂಭ"**ವನ್ನು ಹಮ್ಮಿಕೊಂಡು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಮಹಾಸಭೆಯಿಂದ ಕೊಟ್ಟ ಕರಡಿಗೆ, ಚೆಕ್ ಹಾಗೂ ಪ್ರಶಂಸಾ ಪತ್ರಗಳನ್ನು ನೀಡಿ ಸನ್ಮಾನಿಸಲಾಯಿತು. ಸಮಾರಂಭವನ್ನು ಶ್ರೀ ಎನ್.ತಿಪ್ಪಣ್ಣನವರು ಉದ್ಘಾಟಿಸಿದರು. ಕಾರ್ಯದರ್ಶಿಗಳಾದ ಶ್ರೀ ಹೆಚ್.ಎಂ.ರೇಣುಕ ಪ್ರಸನ್ನರವರು, ಕೋಶಾಧ್ಯಕ್ಷರಾದ ಶ್ರೀಮತಿ ಸುನಂದ ಗಿರೀಶ್‌ರವರು ಹಾಗೂ ಇನ್ನಿತರೇ ಮಹಾಸಭಾ ಪದಾಧಿಕಾರಿಗಳು ಮತ್ತು ಸ್ಥಳೀಯ ಜನಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸಮಾಜದ ಅಂಧ ಯುವತಿಯಾದ ಕುಮಾರಿ ಅಶ್ವಿನಿ ಅಂಗಡಿಯವರನ್ನು ಸನ್ಮಾನಿಸಲಾಯಿತು.

- ಭದ್ರಾವತಿ ತಾಲ್ಲೂಕು ಘಟಕದ ವತಿಯಿಂದ ದಿನಾಂಕ: 5–11–2016ರಂದು ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ವಿದ್ಯಾರ್ಥಿಗಳಿಗೆ **"ಪ್ರತಿಭಾ ಪುರಸ್ಕಾರ"** ಮತ್ತು**"ಅಭಿನಂದನಾ ಸಮಾರಂಭ"**ಹಾಗೂ **"ಧರ್ಮಸಭೆ"**ಯನ್ನು ಭದ್ರಾವತಿಯ ಶ್ರೀ ಭಾರತೀತೀರ್ಥ ಸಭಾಭವನ, ಸಿದ್ಧರೂಡನಗರ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಬಾಳೇಹೊನ್ನೂರಿನ ಶ್ರೀ ರಂಭಾಪುರಿ ಶ್ರೀಗಳವರು ವಹಿಸಿದ್ದರು. ಸಮಾರಂಭದ ಉದ್ಘಾಟನೆಯನ್ನು ಮಹಾಸಭೆಯ ಹಿರಿಯ ಉಪಾಧ್ಯಕ್ಷರಾದ ಶ್ರೀ ಎನ್.ತಿಪ್ಪಣ್ಣನವರು ನೆರವೇರಿಸಿದರು. ಸಮಾರಂಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಮಹಾಸಭೆಯಿಂದ ಕೊಟ್ಟ ಕರಡಿಗೆ, ಚೆಕ್ ಹಾಗೂ ಪ್ರಶಂಸಾ ಪತ್ರಗಳನ್ನು ನೀಡಿ ಸನ್ಮಾನಿಸಲಾಯಿತು. ಮಹಾಸಭೆಯ ಪದಾಧಿಕಾರಿಗಳು, ಸಮಾಜದ ಗಣ್ಯವ್ಯಕ್ತಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

- ಮಹಾಸಭಾದ ಶಿವಮೊಗ್ಗ ಜಿಲ್ಲಾ ಘಟಕ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬಸವಕೇಂದ್ರ, ಶಿವಮೊಗ್ಗ ಇವರ ಸಂಯುಕ್ತಾಶ್ರಯದಲ್ಲಿ ಹಾನಗಲ್ ಕುಮಾರಸ್ವಾಮಿಗಳ 150ನೇ ಜಯಂತ್ಯೋತ್ಸವ ಸಮಾರಂಭವನ್ನು ದಿನಾಂಕ: 30–12–2016ರಂದು ಶಿವಮೊಗ್ಗದಲ್ಲಿ ಆಯೋಜಿಸಲಾಗಿತ್ತು. ದಿವ್ಯ ಸಾನ್ನಿಧ್ಯವನ್ನು ಡಾ. ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು, ಶ್ರೀ ಬೆಕ್ಕಿನಕಲ್ಮಠ, ಶಿವಮೊಗ್ಗ ಇವರು ವಹಿಸಿದ್ದರು. ಅಕ್ಕನಬಳಗ, ಶಿವಮೊಗ್ಗ ಇವರಿಂದ ವಚನಗಾಯನ ಏರ್ಪಡಿಸಲಾಗಿತ್ತು.

**ಧಾರವಾಡ ಜಿಲ್ಲೆ:–**

- ಜಿಲ್ಲಾ ಘಟಕ ಹಾಗೂ ತಾಲ್ಲೂಕು ಘಟಕಗಳ ವತಿಯಿಂದ ಪ್ರತ್ಯೇಕ **'ಬಸವ ಜಯಂತಿ'**ಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

**ಕೊಡಗು ಜಿಲ್ಲೆ:–**

- ಜಿಲ್ಲಾಡಳಿತದ ಸಹಯೋಗದೊಂದಿಗೆ ಕೊಡಗು ಜಿಲ್ಲಾ ಘಟಕದಿಂದ**'ಬಸವ ಜಯಂತಿ'** ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲಾಯಿತು.

- ದಿನಾಂಕ: 18–10–2016ರಂದು ಜಿಲ್ಲೆಯ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಕೊಡ್ಲಿಪೇಟೆಯ ಕಿರಿಕೊಡ್ಲಿ ಮಠದ ಶಾಲಾ ಆವರಣದಲ್ಲಿ **"ಜಿಲ್ಲಾ ಮಟ್ಟದ ವೀರಶೈವ ಧಾರ್ಮಿಕ ಸಮಾವೇಶ"** ಮತ್ತು**"ಪ್ರತಿಭಾ ಪುರಸ್ಕಾರ ಸಮಾರಂಭವನ್ನು"**ಹಮ್ಮಿಕೊಳ್ಳಲಾಗಿತ್ತು. ಸಮಾರಂಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಮಹಾಸಭೆಯಿಂದ ಕೊಟ್ಟ ಕರಡಿಗೆ, ಚೆಕ್ ಹಾಗೂ ಪ್ರಶಂಸಾ ಪತ್ರಗಳನ್ನು ನೀಡಿ ಸನ್ಮಾನಿಸಲಾಯಿತು. ಈ ಸಮಾರಂಭದಲ್ಲಿ ಸ್ಥಳೀಯ ಮಠಾಧೀಶರುಗಳು ದಿವ್ಯ ಸಾನ್ನಿಧ್ಯ ವಹಿಸಿದ್ದರು.ಶ್ರೀ ವೀರರಾಜೇಂದ್ರ ದ್ವಾರ ಉದ್ಘಾಟನೆಯನ್ನು ಮಹಾಸಭೆಯ ಮಹಾಪ್ರಧಾನ ಕಾರ್ಯದರ್ಶಿಗಳು ಹಾಗೂ ಸಚಿವರು ಆದ ಶ್ರೀ ಈಶ್ವರ ಖಂಡ್ರೆಯವರು ನೆರವೇರಿಸಿದರು. ಸಮಾರಂಭವನ್ನು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಉದ್ಘಾಟಿಸಿದರು. ಮಹಾಸಭೆಯ ಅಧ್ಯಕ್ಷರಾದ ಡಾ.ಶಾಮನೂರು ಶಿವಶಂಕರಪ್ಪನವರು ಉಪಸ್ಥಿತರಿದ್ದರು. ಸ್ಥಳೀಯ ಶಾಸಕರು ಹಾಗೂ ಇನ್ನಿತರೇ ಮಹಾಸಭಾ ಪದಾಧಿಕಾರಿಗಳು, ಸಮಾಜದ ಗಣ್ಯವ್ಯಕ್ತಿಗಳು ಭಾಗವಹಿಸಿದ್ದರು.

**ಚಿಕ್ಕಮಗಳೂರು ಜಿಲ್ಲೆ:–**

- ಚಿಕ್ಕಮಗಳೂರು ಜಿಲ್ಲಾ ಘಟಕದ ವತಿಯಿಂದ ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ.ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಶೇಕಡ 90ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ**"ಪ್ರತಿಭಾ ಪುರಸ್ಕಾರ"** ಹಾಗೂ **"ನೂತನವಾಗಿ ಆಯ್ಕೆಯಾದ ಜನಪ್ರತಿನಿಧಿಗಳಿಗೆ ಸನ್ಮಾನ ಸಮಾರಂಭ"** ಕಾರ್ಯಕ್ರಮವನ್ನು ಕಡೂರಿನಲ್ಲಿ ಆಯೋಜಿಸಲಾಗಿತ್ತು. ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಬಾಳೇಹೊನ್ನೂರಿನ ಶ್ರೀ ರಂಭಾಪುರಿ ಶ್ರೀಗಳವರು ವಹಿಸಿದ್ದರು. ಮಹಾಸಭೆಯ ಅಧ್ಯಕ್ಷರಾದ ಡಾ ಶಾಮನೂರು ಶಿವಶಂಕರಪ್ಪನವರು ಸಮಾರಂಭವನ್ನು ಉದ್ಘಾಟಿಸಿದರು. ಹಿರಿಯ ಉಪಾಧ್ಯಕ್ಷರಾದ ಶ್ರೀ ಎನ್.ತಿಪ್ಪಣ್ಣನವರು ಜನಪ್ರತಿನಿಧಿಗಳಿಗೆ ಸನ್ಮಾನಿಸಿದರು. ಮಹಾಸಭೆಯಿಂದ ಕೊಟ್ಟಂತಹ ಕರಡಿಗೆ, ಚೆಕ್ ಹಾಗೂ ಪ್ರಶಂಸಾ ಪತ್ರಗಳನ್ನು ಮಹಾಸಭೆಯ ಮಹಾಪ್ರಧಾನ ಕಾರ್ಯದರ್ಶಿಗಳು ಹಾಗೂ ಸಚಿವರು ಆದ ಶ್ರೀ ಈಶ್ವರ ಖಂಡ್ರೆಯವರು ವಿದ್ಯಾರ್ಥಿಗಳಿಗೆ ನೀಡಿ ಸನ್ಮಾನಿಸಿದರು. ಮಹಾಸಭೆಯ ಕಾರ್ಯದರ್ಶಿಗಳಾದ ಶ್ರೀ ಹೆಚ್.ಎಂ.ರೇಣುಕ ಪ್ರಸನ್ನರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು ಹಾಗೂ ಇನ್ನಿತರೇ ಮಹಾಸಭಾ ಪದಾಧಿಕಾರಿಗಳು, ಸ್ಥಳೀಯ ಸಮಾಜದ ಮುಖಂಡರು ಭಾಗವಹಿಸಿದ್ದರು.

- ಜಿಲ್ಲಾಡಳಿತದ ಸಹಯೋಗದೊಂದಿಗೆ ಚಿಕ್ಕಮಗಳೂರು ಜಿಲ್ಲಾ ಘಟಕದಿಂದ **'ಬಸವ ಜಯಂತಿ'** ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲಾಯಿತು.

**ರಾಯಚೂರು ಜಿಲ್ಲೆ:–**

- ರಾಯಚೂರು ಜಿಲ್ಲಾ ಘಟಕದಿಂದ**'ಬಸವ ಜಯಂತಿ'**ಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

- ಜಿಲ್ಲಾ ಮಹಿಳಾ ವಿಭಾಗ, ಜಿಲ್ಲಾ ಜಾನಪದ ಪರಿಷತ್ತು ಹಾಗೂ ವಿವಿಧ ಮಹಿಳಾ ಘಟಕಗಳ ಸಹಯೋಗದೊಂದಿಗೆ **'ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ'**ಯನ್ನು ಆಚರಿಸಲಾಯಿತು. ಜಿಲ್ಲಾ ಮಹಿಳಾ ವಿಭಾಗವು ಜಿಲ್ಲೆಯಲ್ಲಿ ಸಂಘಟನೆ, ಸದಸ್ಯತ್ವದ ಹೆಚ್ಚಳಕ್ಕೆ ಒತ್ತು ನೀಡಿದ್ದು ಜಾಗೃತಿ ಮೂಡಿಸುವತ್ತ ಗಮನಹರಿಸಲಾಗಿದೆ.

- ಜಿಲ್ಲಾ ಘಟಕದ ವತಿಯಿಂದ ದಿನಾಂಕ: 27–11–2016ರಂದು ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ.ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ**'ಪ್ರತಿಭಾ ಪುರಸ್ಕಾರ'**ಸಮಾರಂಭವನ್ನು ಆಯೋಜಿಸಲಾಗಿತ್ತು. ಸಮಾರಂಭವನ್ನು ಮಹಾಸಭೆಯ ಹಿರಿಯ ಉಪಾಧ್ಯಕ್ಷರಾದ ಶ್ರೀ ಎನ್.ತಿಪ್ಪಣ್ಣನವರು ಉದ್ಘಾಟಿಸಿದರು. ಬಹುಮಾನ ವಿತರಣೆಯನ್ನು ಮಹಾಸಭೆಯ ಮಹಾಪ್ರಧಾನ ಕಾರ್ಯದರ್ಶಿಗಳು ಹಾಗೂ ಸಚಿವರು ಆದ ಶ್ರೀ ಈಶ್ವರ ಖಂಡ್ರೆಯವರು ಮಾಡಿದರು. ಸಮಾರಂಭದಲ್ಲಿ ಸ್ಥಳೀಯ ಶಾಸಕರು, ವಿಧಾನಪರಿಷತ್ ಸದಸ್ಯರು, ಮಹಾಸಭಾ ಪದಾಧಿಕಾರಿಗಳು, ಸಮಾಜದ ಗಣ್ಯವ್ಯಕ್ತಿಗಳು ಭಾಗವಹಿಸಿದ್ದರು.

**ಯಾದಗಿರಿ ಜಿಲ್ಲೆ:–**

- 2016ನೇ ಸಾಲಿನ ಎಸ್.ಎಸ್.ಎಲ್.ಸಿ.ಮತ್ತು ದ್ವಿತೀಯ ಪಿ.ಯು.ಸಿ.ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿದ ಜಿಲ್ಲೆಯ ವಿದ್ಯಾರ್ಥಿಗಳಿಗೆ **'ಪ್ರತಿಭಾ ಪುರಸ್ಕಾರ'**ನೀಡಿ ಸನ್ಮಾನಿಸಲಾಯಿತು. ಈ ಸಮಾರಂಭವನ್ನು ಮಹಾಸಭೆಯ ಉಪಾಧ್ಯಕ್ಷರಾಗಿದ್ದ ಶ್ರೀ ಲಿಂಗನಗೌಡ ಮಲಹಾರ್ ಕಾರಡ್ಡಿ ಉದ್ಘಾಟಿಸಿದರು. ಇನ್ನಿತರೇ ಮಹಾಸಭೆಯ, ಜಿಲ್ಲಾ ಹಾಗೂ ತಾಲ್ಲೂಕು ಘಟಕಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

- ಜಿಲ್ಲೆಯಾದ್ಯಂತ**'ಬಸವ ಜಯಂತಿ'**ಯನ್ನು ಆಚರಿಸಲಾಯಿತು.

**ಮಂಡ್ಯ ಜಿಲ್ಲೆ:–**

- ಮಂಡ್ಯ ಜಿಲ್ಲೆಯ 7 ತಾಲ್ಲೂಕುಗಳಲ್ಲೂ ಘಟಕಗಳನ್ನು ರಚಿಸಲಾಗಿದೆ. ಜಿಲ್ಲಾ ಮಹಿಳಾ ಮತ್ತು ಯುವ ವಿಭಾಗಗಳನ್ನು ರಚಿಸಲಾಗಿದೆ. ಈ ಎಲ್ಲಾ ಘಟಕಗಳು ಸಕ್ರಿಯವಾಗಿ ಸಂಘಟನೆ, ಮಹಾತ್ಮರ ಜಯಂತಿ, ಸಾಹಿತ್ಯ, ಸಂಸ್ಕೃತಿ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದಾರೆ. ಜಿಲ್ಲೆಯಾದ್ಯಂತ 38 ಮಠಗಳಿದ್ದು ನಮ್ಮ ಪದಾಧಿಕಾರಿಗಳು ಅಲ್ಲಿನ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದಾರೆ. ಪ್ರತಿ ತಾಲ್ಲೂಕು ಕೇಂದ್ರಗಳಲ್ಲೂ ಜಿಲ್ಲೆಯಾದ್ಯಂತ ಒಟ್ಟು 8 ವೀರಶೈವ–ಲಿಂಗಾಯತ ಸಹಕಾರ ಸಂಘಗಳಿದ್ದು, 10 ಸಾವಿರಕ್ಕೂ ಮಿಗಿಲಾದ ಸದಸ್ಯರನ್ನು ಹೊಂದಿದ್ದು ತನ್ನ ಸದಸ್ಯರುಗಳಿಗೆ ಆರ್ಥಿಕ ಸಹಾಯವನ್ನು ನೀಡುತ್ತಿದ್ದು, ಸಹಬಾಳ್ವೆಗೆ ಸಹಕಾರಿಯಾಗಿವೆ.

- 2016ರ ಜೂನ್ ತಿಂಗಳಲ್ಲಿ ಪಾಂಡವಪುರ ಟೌನ್‌ನಲ್ಲಿ ತಾಲ್ಲೂಕು ಘಟಕದ ಅಧ್ಯಕ್ಷರಾದ ಶ್ರೀ ಎಸ್.ಮಂಜುನಾಥ ಹಾಗೂ ಪದಾಧಿಕಾರಿಗಳು **"ಬಸವ ಜಯಂತಿ"**ಯನ್ನು ಅದ್ದೂರಿಯಾಗಿ, ಅರ್ಥಪೂರ್ಣವಾಗಿ ಆಚರಿಸಿದರು.2000ಕ್ಕೂ ಹೆಚ್ಚು ಬಸವಾಭಿಮಾನಿಗಳು ಭಾಗವಹಿಸಿದ್ದರು. ಬಸವೇಶ್ವರರ ಭಾವಚಿತ್ರವನ್ನು ನಗರದ ಪ್ರಮುಖ ಬೀದಿಗಳಲ್ಲಿ ಜಾನಪದ ಕಲಾತಂಡಗಳು ಹಾಗೂ 101 ಕಳಸಗಳೊಡನೆ ಮೆರವಣಿಗೆ ಮಾಡಲಾಯಿತು. ಶಾಸಕರಾದ

ಶ್ರೀ ಪುಟ್ಟಣ್ಣಯ್ಯನವರು ಹೆಚ್ಚಿನ ಸಹಕಾರ ನೀಡಿದರು. ವೇದಿಕೆಯಲ್ಲಿ ಪೂಜ್ಯ ಮಠಾಧಿಪತಿಗಳು, ಸಂಸದರಾದ ಶ್ರೀ ಪುಟ್ಟರಾಜುರವರು ಹಾಗೂ ಶಾಸಕರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸಾಹಿತ್ಯ ಹಾಗೂ ಸಂಘಟನೆಯ ಸೇವೆಗಾಗಿ ಜಿಲ್ಲಾಡಳಿತದಿಂದ **"ರಾಜ್ಯೋತ್ಸವ ಪ್ರಶಸ್ತಿ"** ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ **"ಸಾಹಿತ್ಯ ಸೇವಾ ಪ್ರಶಸ್ತಿ"ಗೆ** ಭಾಜನರಾಗಿರುವ ಜಿಲ್ಲಾ ಘಟಕದ ಅಧ್ಯಕ್ಷರಾದ **ಶ್ರೀಯುತ ಬನ್ನಂಗಾಡಿ ಸಿದ್ಧಲಿಂಗಯ್ಯನವರಿಗೆ** ಸನ್ಮಾನಿಸಿ ಗೌರವಿಸಲಾಯಿತು.

- 2016ನೇ ಸಾಲಿನಲ್ಲಿ ಮಹಾಸಭಾ ಕೊಡುವ **'ಪ್ರತಿಭಾ ಪುರಸ್ಕಾರ'** ಪ್ರಶಸ್ತಿ, ಚೆಕ್, ಕರಡಿಗೆಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಯಿತು.ಇದೇ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾಯಿತರಾದ ಸಮುದಾಯದ ಸದಸ್ಯರುಗಳಿಗೆ ಸನ್ಮಾನಿಸಲಾಯಿತು. ಹಿರಿಯ ಉಪಾಧ್ಯಕ್ಷರಾದ ಶ್ರೀ ಎನ್.ತಿಪ್ಪಣ್ಣನವರು, ಕಾರ್ಯದರ್ಶಿಗಳಾದ ಶ್ರೀ ಹೆಚ್.ಎಂ.ರೇಣುಕ ಪ್ರಸನ್ನರವರು, ಜಿಲ್ಲಾಧ್ಯಕ್ಷರಾದ ಶ್ರೀ ಸಿದ್ಧಲಿಂಗಯ್ಯ ಬನ್ನಂಗಾಡಿಯವರು, ತಾಲ್ಲೂಕು ಘಟಕದ ಅಧ್ಯಕ್ಷರಾದ ಶ್ರೀ ಎಸ್.ಮಂಜುನಾಥ್ ಹಾಗೂ ಇನ್ನಿತರ ಮಹಾಸಭೆಯ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.
- ಹೆಚ್ಚು ಮಹಾಸಭೆಯ ಸದಸ್ಯರನ್ನು ಹೊಂದಿರುವ ಮಳವಳ್ಳಿ ತಾಲ್ಲೂಕು ಘಟಕವು ಪ್ರತಿ ತಿಂಗಳು ಏನಾದರೊಂದು ಧಾರ್ಮಿಕ ಕಾರ್ಯಕ್ರಮಗಳನ್ನು ಅಲ್ಲಿನ ಮಠಾಧಿಪತಿಗಳ ಸಾನ್ನಿಧ್ಯದಲ್ಲಿ ಹಮ್ಮಿಕೊಳ್ಳುತ್ತಾರೆ. ಬಸವ ಜಯಂತಿ, ಶರಣರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸುತ್ತಾರೆ. 2016ನೇ ಸಾಲಿನ ಪ್ರತಿಭಾಪುರಸ್ಕಾರವನ್ನು ಮಳವಳ್ಳಿ ತಾಲ್ಲೂಕು ಘಟಕವು ಮಹಾಸಭೆಯ ಹಿರಿಯ ಉಪಾಧ್ಯಕ್ಷರಾದ ಶ್ರೀ ಎನ್.ತಿಪ್ಪಣ್ಣನವರು, ಉಪಾಧ್ಯಕ್ಷರಾದ ಶ್ರೀಮತಿ ಮಧುರಾ ಅಶೋಕಕುಮಾರ, ಮಹಾಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಈಶ್ವರ ಖಂಡ್ರೆಯವರು, ರಾಜ್ಯ ಕಾರ್ಯದರ್ಶಿಗಳಾದ ಶ್ರೀ ನಟರಾಜ್ ಸಾಗರನಹಳ್ಳಿ, ಜಿಲ್ಲಾಧ್ಯಕ್ಷರಾದ ಶ್ರೀ ಸಿದ್ದಲಿಂಗಯ್ಯ ಬನ್ನಂಗಾಡಿ ಇನ್ನಿತರೇ ಪದಾಧಿಕಾರಿಗಳನ್ನು ಆಹ್ವಾನಿಸಿ ಅದ್ದೂರಿಯಾಗಿ ಏರ್ಪಡಿಸಿದ್ದರು.
- ಸುತ್ತೂರು ಜಗದ್ಗುರು ಡಾ.ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ **ಶತಮಾನೋತ್ಸವ ಆಚರಣೆಯ**ನಿಮಿತ್ತ ಪ್ರತಿ ತಾಲ್ಲೂಕುಗಳಲ್ಲೂ ಸಂಚರಿಸಿದ ರಥಯಾತ್ರೆಯಲ್ಲಿ ಆಯಾಯಾ ತಾಲ್ಲೂಕು ಘಟಕಗಳು ಸಮುದಾಯಗಳೊಂದಿಗೆ ಭಾಗವಹಿಸಿದ್ದರು. ಅದೇ ಪ್ರಕಾರ ತ್ರಿವಿಧ ದಾಸೋಹಿ **ಡಾ.ಶಿವಕುಮಾರಸ್ವಾಮಿಗಳವರ 110ನೇ ಜನ್ಮದಿನೋತ್ಸವ** ರಥಯಾತ್ರೆಯು ಜಿಲ್ಲೆಯಾದ್ಯಂತ ಸಂಚರಿಸಿತು. ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಶ್ರದ್ಧಾ, ಭಕ್ತಿಯಿಂದ ಪಾಲ್ಗೊಂಡಿದ್ದರು.
- 2016ರಲ್ಲಿ ಜಿಲ್ಲೆಯಾದ್ಯಂತ ನಮ್ಮ ಸಮುದಾಯದ 17 ವಿದ್ಯಾರ್ಥಿಗಳಿಗೆ ಬೆಂಗಳೂರಿನ ವಿದ್ಯಾರ್ಥಿ ನಿಲಯಕ್ಕೆ ಪ್ರವೇಶ ದೊರಕಿಸಿಕೊಟ್ಟು ಹಾಗೂ ಈ ವಿದ್ಯಾರ್ಥಿಗಳಿಗೆ ಧರ್ಮಪ್ರವೃತ್ತ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆಯಿಂದ ವಿದ್ಯಾರ್ಥಿ ವೇತನವನ್ನು ಜಿಲ್ಲಾಧ್ಯಕ್ಷರಾದ ಶ್ರೀ ಸಿದ್ಧಲಿಂಗಯ್ಯನವರ ಶಿಫಾರಸ್ಸಿನಿಂದ ಕೊಡಿಸಲಾಗಿದೆ. ಅತಿ ಕಡುಬಡ ವಿದ್ಯಾರ್ಥಿಗಳ ಮನವಿ ಮೇರೆಗೆ ಬೆಂಗಳೂರಿನ ಗಣ್ಯರಿಂದ ಆರ್ಥಿಕ ಸಹಾಯವನ್ನು ಕೊಡಿಸಲಾಗಿದೆ.
- ಪ್ರತಿ ತಾಲ್ಲೂಕು ಘಟಕಗಳು ಅಲ್ಲಿನ ಲಭ್ಯವಿರುವ ಸರ್ಕಾರಿ ಜಾಗವನ್ನು **ಸಮುದಾಯ ಭವನ** ನಿರ್ಮಿಸಲು ಸಹಾಯ ಮಾಡಬೇಕೆಂದು ಸ್ಥಳೀಯ ಶಾಸಕರುಗಳಿಗೆ ಹಾಗೂ ಪೌರಾಡಳಿತ ಸಚಿವರಿಗೆ ಮನವಿಯನ್ನು ಮಾಡಲಾಗಿದ್ದು ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿವೆ. ಪಾಂಡವಪುರ ತಾಲ್ಲೂಕು ಘಟಕಕ್ಕೆ ಅಲ್ಲಿ ಲಭ್ಯವಿರುವ ಸರ್ಕಾರಿ ಜಾಗವನ್ನು ನೀಡುವಂತೆ ಅಲ್ಲಿನ ಶಾಸಕ ಶ್ರೀ ಪುಟ್ಟಣ್ಣಯ್ಯನವರಿಗೆ ಮಹಾಸಭೆಯ ಅಧ್ಯಕ್ಷರು ವಿನಂತಿ ಮಾಡಿದ್ದಾರೆ. ಜಾಗ ಸಿಗುವ ಭರವಸೆ ತಾಲ್ಲೂಕು ಘಟಕಕ್ಕಿದೆ.

- ಮಂಡ್ಯ ನಗರದ ಕಲಾಮಂದಿರದಲ್ಲಿ ಜಿಲ್ಲಾ ಘಟಕ ಹಾಗೂ ಕನ್ನಂಬಾಡಿ ದಿನಪತ್ರಿಕೆ ಸಹಯೊಗದೊಡನೆ **ಜಗಜ್ಯೋತಿ ಬಸವೇಶ್ವರ** ಹಾಗೂ **ಮಾಗಡಿ ಕೆಂಪೇಗೌಡರ ಸ್ಮರಣಾರ್ಥ ಕವಿಕಾವ್ಯ ಸಮ್ಮೇಳನವನ್ನು** ಏರ್ಪಡಿಸಲಾಗಿತ್ತು. ಮಹಾಸಭೆಯ ಉಪಾಧ್ಯಕ್ಷರಾಗಿರುವ ಶ್ರೀಮತಿ ಮಧುರಾ ಅಶೋಕಕುಮಾರ ಇವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತು. ಈ ಸಮಾರಂಭದಲ್ಲಿ ಮಹಾಸಭೆಯ ಕಾರ್ಯದರ್ಶಿಗಳಾದ ಶ್ರೀ ಹೆಚ್.ಎಂ.ರೇಣುಕ ಪ್ರಸನ್ನ, ಶ್ರೀ ಚಂ.ಪ, ಡಾ. ಮುದ್ದೇಗೌಡ, ಮಾಜಿ ಶಾಸಕರಾದ ಶ್ರೀ ಶಿವರಾಮೇಗೌಡ, ಸಿದ್ದಲಿಂಗಯ್ಯ ಬನ್ನಂಗಾಡಿ, ಕೃಷ್ಣಸ್ವರ್ಣಸಂದ್ರ, ಲೋಕೇಶ್, ರಾಷ್ಟ್ರೀಯ ಮಹಿಳಾ ವಿಭಾಗದ ಉಪಾಧ್ಯಕ್ಷೆ ಹಾಗೂ ಜಿಲ್ಲಾ ಮಹಿಳಾ ವಿಭಾಗದ ಅಧ್ಯಕ್ಷೆ ಶ್ರೀಮತಿ ಭ್ರಮರಾಂಬ ಶಿವಣ್ಣ ಇವರುಗಳು ಉಪಸ್ಥಿತರಿದ್ದರು.

**ಚಿಕ್ಕಬಳ್ಳಾಪುರ ಜಿಲ್ಲೆ:–**

- ಜಿಲ್ಲೆ ಮತ್ತು ತಾಲ್ಲೂಕು ಘಟಕಗಳ ವತಿಯಿಂದ**'ಬಸವ ಜಯಂತಿ'**ಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.
- ಗೌರಿಬಿದನೂರಿನಲ್ಲಿಎಸ್.ಎಸ್.ಎಲ್.ಸಿ.ಮತ್ತು ದ್ವಿತೀಯ ಪಿ.ಯು.ಸಿ.ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿದ ಜಿಲ್ಲೆಯ ವಿದ್ಯಾರ್ಥಿಗಳಿಗೆ **'ಪ್ರತಿಭಾ ಪುರಸ್ಕಾರ'**ನೀಡಿ ಸನ್ಮಾನಿಸಲಾಯಿತು. ಈ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಸ್.ವಾಗೀಶ್ ಪ್ರಸಾದ್‌ರವರು ಹಾಗೂ ಇನ್ನಿತರೇ ಮಹಾಸಭಾ ಪದಾಧಿಕಾರಿಗಳು ಭಾಗವಹಿಸಿದ್ದರು.

**ಬೆಂಗಳೂರು ಗ್ರಾಮಾಂತರ ಜಿಲ್ಲೆ:–**

- ಜಿಲ್ಲಾ ಘಟಕದವತಿಯಿಂದ **'ಬಸವ ಜಯಂತಿ'**ಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.
- ಜಿಲ್ಲಾ ಘಟಕ ಹಾಗೂ ರುದ್ರೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಸಹಯೋಗದೊಂದಿಗೆ ನೆಲಮಂಗಲ ಟೌನ್‌ನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ.ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿದ ಜಿಲ್ಲೆಯ ವಿದ್ಯಾರ್ಥಿಗಳಿಗೆ**'ಪ್ರತಿಭಾ ಪುರಸ್ಕಾರ'**ನೀಡಿ ಗೌರವಿಸಲಾಯಿತು. ಈ ಸಮಾರಂಭದಲ್ಲಿ ಮಹಾಸಭೆಯ ಹಿರಿಯ ಉಪಾಧ್ಯಕ್ಷರಾದ ಶ್ರೀ ಎನ್.ತಿಪ್ಪಣ್ಣನವರೊಳಗೊಂಡಂತೆ ಮಹಾಸಭೆಯ ಇನ್ನಿತರೇ ಪದಾಧಿಕಾರಿಗಳು ಭಾಗವಹಿಸಿದ್ದರು.

**ಕೊಪ್ಪಳ ಜಿಲ್ಲೆ:–**

- ಜಿಲ್ಲೆ ಮತ್ತು ತಾಲ್ಲೂಕು ಘಟಕಗಳ ವತಿಯಿಂದ**'ಬಸವ ಜಯಂತಿ'**ಯನ್ನು ಆಚರಿಸಲಾಯಿತು.
- 2016ನೇ ಸಾಲಿನಎಸ್.ಎಸ್.ಎಲ್.ಸಿ.ಮತ್ತು ದ್ವಿತೀಯ ಪಿ.ಯು.ಸಿ.ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿದ ಜಿಲ್ಲೆಯ ವಿದ್ಯಾರ್ಥಿಗಳಿಗೆ**'ಪ್ರತಿಭಾ ಪುರಸ್ಕಾರ'**ನೀಡಿ ಸನ್ಮಾನಿಸಲಾಯಿತು.

**ಕಲಬುರ್ಗಿ ಜಿಲ್ಲೆ:–**

- ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ.ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿದ ಜಿಲ್ಲೆಯ ವಿದ್ಯಾರ್ಥಿಗಳಿಗೆ **'ಪ್ರತಿಭಾ ಪುರಸ್ಕಾರ'**ನೀಡಿ ಸನ್ಮಾನಿಸಲಾಯಿತು.
- ಜಿಲ್ಲೆ ಮತ್ತು ತಾಲ್ಲೂಕು ಘಟಕಗಳ ವತಿಯಿಂದ **'ಬಸವ ಜಯಂತಿ'**ಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

**ಹಾಸನ ಜಿಲ್ಲೆ:–**

- ಜಿಲ್ಲಾ ಘಟಕದವತಿಯಿಂದ **'ಬಸವ ಜಯಂತಿ'**ಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.
- ಜಿಲ್ಲಾ ಘಟಕದಿಂದ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ.ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿದ ಜಿಲ್ಲೆಯ ವಿದ್ಯಾರ್ಥಿಗಳಿಗೆ**'ಪ್ರತಿಭಾ ಪುರಸ್ಕಾರ'**ಮತ್ತು **"ತಾಲ್ಲೂಕು ಮಹಿಳಾ ಘಟಕದ ವಾರ್ಷಿಕೋತ್ಸವ ಸಮಾರಂಭ"**ವನ್ನು ಬೇಲೂರಿನ ಡಾ.ಶ್ರೀಶ್ರೀ ಶಿವಕುಮಾರ ಸ್ವಾಮೀಜಿ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿತ್ತು. ಮಹಾಸಭೆಯ ಅಧ್ಯಕ್ಷರಾದ ಡಾ ಶಾಮನೂರು ಶಿವಶಂಕರಪ್ಪನವರು ವಿದ್ಯಾರ್ಥಿಗಳನ್ನು ಸನ್ಮಾನಿಸಿದರು. ಸಮಾರಂಭದಲ್ಲಿ ಸ್ಥಳೀಯ ಮಹಾಸಭೆಯ ಪದಾಧಿಕಾರಿಗಳು, ಶಾಸಕರು, ಸಚಿವರು, ಗಣ್ಯವ್ಯಕ್ತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮಾರಂಭವನ್ನು ಯಶಸ್ವಿಗೊಳಿಸಿದರು.

**ಮಂಗಳೂರು ಮತ್ತು ಉಡುಪಿ ಜಿಲ್ಲೆ:–**

- ಜಿಲ್ಲಾ ಘಟಕದವತಿಯಿಂದ **'ಬಸವ ಜಯಂತಿ'**ಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.
- ಜಿಲ್ಲಾ ಘಟಕದಿಂದ ಪ್ರತಿ ತಿಂಗಳು **"ಶರಣ ಕಮ್ಮಟ"** ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

**ಬಳ್ಳಾರಿ ಜಿಲ್ಲೆ:–**

- ಜಿಲ್ಲಾ ಘಟಕದವತಿಯಿಂದ **'ಬಸವ ಜಯಂತಿ'**ಯನ್ನು ಅದ್ದೂರಿಯಾಗಿ ವಿಜೃಂಭಣೆಯಿಂದ ಆಚರಿಸಲಾಯಿತು. ಬಳ್ಳಾರಿ ಜಿಲ್ಲೆಯ ಪ್ರತಿಯೊಂದು ತಾಲ್ಲೂಕು ಘಟಕಗಳಲ್ಲೂ **"ಬಸವ ಜಯಂತಿ"**ಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.
- ಜಿಲ್ಲಾ ಘಟಕದಿಂದ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ.ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿದ ಜಿಲ್ಲೆಯ ವಿದ್ಯಾರ್ಥಿಗಳಿಗೆ **'ಪ್ರತಿಭಾ ಪುರಸ್ಕಾರ'**ಏರ್ಪಡಿಸಲಾಗಿತ್ತು. ಮಹಾಸಭೆಯ ಹಿರಿಯ ಉಪಾಧ್ಯಕ್ಷರಾದ ಶ್ರೀ ಎನ್.ತಿಪ್ಪಣ್ಣನವರು ಮತ್ತು ಇನ್ನಿತರೇ ಜಿಲ್ಲಾ ಹಾಗೂ ತಾಲ್ಲೂಕು ಘಟಕಗಳ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಮಹಾಸಭೆಯಿಂದ ಕೊಟ್ಟ ಚೆಕ್, ಕರಡಿಗೆ ಹಾಗೂ ಪ್ರಶಂಸಾ ಪತ್ರವನ್ನು ವಿದ್ಯಾರ್ಥಿಗಳಿಗೆ ನೀಡಿ ಪ್ರೋತ್ಸಾಹಿಸಲಾಯಿತು.

**ಕೃತಜ್ಞತೆಗಳು:–**

ಮಹಾಸಭೆಯ ಪ್ರಯತ್ನಗಳನ್ನು ಹಾಗೂ ಕಾರ್ಯಕ್ರಮಗಳನ್ನು ಸದಾ ಬೆಂಬಲಿಸಿ, ಆಶೀರ್ವದಿಸಿ ಮಾರ್ಗದರ್ಶನ ನೀಡುತ್ತಾ ಬಂದಿರುವ ಎಲ್ಲಾ ಪೂಜ್ಯ ಪೀಠಾಧೀಶರುಗಳಿಗೂ ಹಾಗೂ ಮಠಾಧೀಶರುಗಳಿಗೂ ಮಹಾಸಭೆಯು ಅತ್ಯಂತ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸುತ್ತದೆ.

ಇದಲ್ಲದೇ, ಸದಾ ಸಹಾಯ, ಸಹಕಾರ, ಸಲಹೆಗಳನ್ನು ನೀಡುತ್ತಾ ಬಂದಿರುವ ಸಮಾಜದ ಎಲ್ಲಾ ಜನಪ್ರತಿನಿಧಿಗಳು, ಶಾಸಕರು, ಸಚಿವರು, ಸಂಸದರು, ಪತ್ರಕರ್ತರು, ಬುದ್ಧಿಜೀವಿಗಳು, ಸಾಹಿತಿಗಳು, ಸಂಶೋಧಕರು, ಸಂಘ–ಸಂಸ್ಥೆಗಳು, ಸರ್ಕಾರಿ ಅಧಿಕಾರಿಗಳು, ರಾಜ್ಯ/ಜಿಲ್ಲಾ/ತಾಲ್ಲೂಕು/ ಇತರೇ ಘಟಕಗಳ ಅಧ್ಯಕ್ಷರು ಪ್ರಧಾನ ಕಾರ್ಯದರ್ಶಿಗಳು, ಪದಾಧಿಕಾರಿಗಳು ಹಾಗೂ ಎಲ್ಲಾ ಸದಸ್ಯರು ಮತ್ತು ಮಹಿಳಾ ಹಾಗೂ ಯುವ ವಿಭಾಗಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು,

ಪದಾಧಿಕಾರಿಗಳು, ಮಹಾಸಭೆಯ ಎಲ್ಲಾ ಸದಸ್ಯರುಗಳು ಮತ್ತು ಕೃಷಿ ಸಮಿತಿ ಹಾಗೂ ಕೃಷಿ ಕಾಯಕ ಪತ್ರಿಕೆಯ ಸಂಪಾದಕ ಮಂಡಳಿ ಸದಸ್ಯರುಗಳಿಗೂ ಗೌರವಪೂರ್ವಕವಾಗಿ ವಂದಿಸುತ್ತದೆ. ವಿಶೇಷವಾಗಿ ಪ್ರಧಾನ ಕಛೇರಿಯ ಸಿಬ್ಬಂದಿಯವರು ಸಮಯಾನುಸಾರ ನಿಷ್ಠೆ ಹಾಗೂ ಅತ್ಯಂತ ಪ್ರಾಮಾಣಿಕತೆಯಿಂದ ನಿರ್ವಹಿಸುವ ಅವರ ಕಾರ್ಯದಕ್ಷತೆಯನ್ನು ಅಭಿನಂದಿಸುತ್ತದೆ.

ಮಹಾಸಭೆಯ ಲೆಕ್ಕಪತ್ರಗಳನ್ನು ಪ್ರತಿವರ್ಷವೂ ಪರಿಶೀಲಿಸಿ ನಿಗದಿತ ವೇಳೆಯಲ್ಲಿ ವರದಿಯನ್ನು ಒದಗಿಸುವ ಲೆಕ್ಕಪರಿಶೋಧಕರಾದ **ಮೆ॥ ಬಿ.ಆರ್.ವಿ.ಗೌಡ & ಕಂಪನಿ, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು** ಇವರ ಸೇವೆಯನ್ನು ಹಾಗೂ ಆಹ್ವಾನ ಪತ್ರಿಕೆ, ಕೃಷಿ ಕಾಯಕ ಪತ್ರಿಕೆ, ವಾರ್ಷಿಕ ವರದಿ ಇನ್ನು ಇತ್ಯಾದಿ ಪುಸ್ತಕಗಳನ್ನು ಮುದ್ರಿಸಿಕೊಡುವ **ಮೆ॥ ಸ್ನೇಹಾ ಪ್ರಿಂಟರ್ಸ್, ಬೆಂಗಳೂರು** ಇವರ ಸೇವೆಯನ್ನು ಮಹಾಸಭೆ ಸ್ಮರಿಸುತ್ತದೆ.

**(ಈಶ್ವರ ಖಂಡ್ರೆ,** ಸಚಿವರು)
ಮಹಾಪ್ರಧಾನ ಕಾರ್ಯದರ್ಶಿ

**(ಡಾ. ಶಾಮನೂರು ಶಿವಶಂಕರಪ್ಪ,** ಶಾಸಕರು)
ಅಧ್ಯಕ್ಷರು

ಸ್ಥಳ : ಬೆಂಗಳೂರು
ದಿನಾಂಕ : 01–12–2017